ಶ್ರೀ ಡಿ.ವಿ. ಸದಾನಂದಗೌಡ :— ನಾನು ಪ್ರಾಮಾಣಿಕವಾಗಿ ಹೇಳಿದ್ದು, ಬಡ ಸಾಕ್ಷಿದಾರರ ಬಗ್ಗೆ ಹೇಳಿದ್ದು, ಆರೋಪಿಗಳಿಗೆ ನಾನು ರಕ್ಷಣೆ ಕೊಡಬೇಕೆಂದು ಹೇಳುತ್ತಿಲ್ಲ. ಬೆಂಗಳೂರಿನಲ್ಲಿ ಅಲ್ಲದಿದ್ದರೆ ಡೆಲ್ಲಿಯಲ್ಲಾದರೂ ತನಿಖಾ ಕೇಂದ್ರವನ್ನು ಮಾಡಿ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು, ಅದಕ್ಕೆ ನನ್ನ ಅಭ್ಯಂತರವಿಲ್ಲ. ಇನ್ನೊಂದು ವಿಚಾರವೇನೆಂದರೆ ಈ ಕೋಸ್ಟಲ್ ಬೆಲ್ಟ್‌ನಲ್ಲಿ ಪೂರ್ತಿಯಾಗಿ ವಿದೇಶಿ ಕೈವಾಡ ತುಂಬಾ ಇದೆ. ಇದರ ಬಗ್ಗೆ ಹೆಚ್ಚಿನ ವ್ಯವಸ್ಥೆ ಮಾಡಬೇಕಾಗಿದೆ. ಇದರ ಬಗ್ಗೆ ನಾನು ಎರಡು, ಮೂರು ಸಲಹೆ ಪ್ರಸ್ತಾಪ ಮಾಡಿದ್ದೇನೆ. ಸನ್ಮಾನ್ಯ ಗೃಹ ಸಚಿವರು ಇದರಲ್ಲಿ ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕು. ಕೊನೆಯದಾಗಿ ಓಟಿಗೋಸ್ಕರ ಇಂಥದ್ದನ್ನು ಪರಿವರ್ತನೆ ಮಾಡುವುದು ಉಂಟು. ಏಕೆಂದರೆ ಓಟ್ ಬ್ಯಾಂಕ್‌ಗಳನ್ನು ನಿರ್ಮಾಣ ಮಾಡುವಂತಹ ಪ್ರಯತ್ನ ನಡೆಯುತ್ತದೆ. ಇದನ್ನು ಅವರು ನೋಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :— ಶಾಸಕ ಚಿತ್ತರಂಜನ್‌ರವರ ವರದಿಯನ್ನು ಸದನದಲ್ಲಿ ಯಾವಾಗ ಮಂಡಿಸುತ್ತೀರಿ?

ಅಧ್ಯಕ್ಷರು :— ಈಗ ಈ ವಿಚಾರದ ಚರ್ಚೆ ಮುಕ್ತಾಯವಾಗಿದೆ. ಮಾನ್ಯ ಗೃಹಮಂತ್ರಿಗಳು ಮಾಹಿತಿಯನ್ನು ಪಡೆದುಕೊಂಡು ವಿವರವಾದ ಉತ್ತರವನ್ನು ನಾಳೇ ಕೊಡುತ್ತೇನೆಂದು ಹೇಳಿದ್ದಾರೆ. ಪುನಃ ಸದನವು ಮಧ್ಯಾಹ್ನ 3-30ಕ್ಕೆ ಸಮಾವೇಶ ಗೊಳ್ಳುವುದು.

ಸದನವು 2-26ಕ್ಕೆ ಮುಂದೂಡಲ್ಪಟ್ಟು ಮತ್ತೆ 3-30ಕ್ಕೆ ಸಮಾವೇಶ ಗೊಳ್ಳಲು ನಿರ್ಧರಿಸಿತು.

(ಸದನವು ಪುನ 3ಗಂಟೆ 40ನಿಮುಷಕ್ಕೆ ಸಮಾವೇಶಗೊಂಡಿತು ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

MR. SPEAKER: Mr. Reddy, you will have to conclude in twenty minutes ಏಕೆಂದರೆ ನಾನು ಯಡಿಯೂರಪ್ಪನವರಿಗೆ ಪ್ರಾಮಿಸ್ ಮಾಡಿದ್ದೇನೆ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ :— ಮುಖ್ಯಮಂತ್ರಿಗಳು ಇರಬೇಕು. ಇದು ನೇರವಾಗಿ ಅವರಿಗೆ ಸಂಬಂಧಪಟ್ಟಿರತಕ್ಕಂಥಾದ್ದು. ನಾನು ತಮ್ಮಲ್ಲಿ ವಿನಂತಿಸಿದ್ದೆ.

ಅಧ್ಯಕ್ಷರು :— ಅವರು ಬರುತ್ತಾರೆ. ತಾವು ಪ್ರಾರಂಭಮಾಡಿ. ಲೇಬರ್ ಮಿನಿಸ್ಟರ್ ಇದ್ದಾರೆ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ:— ಅವರು ಹೊಸದಾಗಿ ಮಂತ್ರಿಯಾಗಿದ್ದಾರೆ. ವಿವರಗಳು ಪೂರ್ತಿಯಾಗಿ ಅವರಿಗೆ ಗೊತ್ತಿಲ್ಲ. ನೀವು ಮಾತನಾಡಿ ಎಂದರೆ ಮಾತನಾಡುತ್ತೇನೆ.

ಅಧ್ಯಕ್ಷರು:— ನೀವು ಮಾತನಾಡಿ. I will assist you.

*(ಅ) ಬಿಪಿಎಲ್ ಕಾರ್ಖಾನೆಯ ನೌಕರರು ಮುಷ್ಕರ ಹೂಡಿರುವ ಬಗ್ಗೆ.*

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:— ಸನ್ಮಾನ್ಯ ಸಭಾಧ್ಯಕ್ಷರೇ, ಸುಮಾರು ನಾಲ್ಕು ತಿಂಗಳಿಂದ ಅಂದರೆ 19.11.98 ರಿಂದ ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತ ಇರತಕ್ಕಂಥ ಬಿ.ಪಿ.ಎಲ್ ಕಾರ್ಖಾನೆ ಕಾರ್ಮಿಕರು ಹೋರಾಟದಲ್ಲಿ ಇದ್ದಾರೆ. ಅವರ ಬೇಡಿಕೆ ಏನು ಎಂದರೆ ಸಂಬಳ ಜಾಸ್ತಿ ಕೊಡಿ ಎಂದು ಅವರು ಕೇಳಿಲ್ಲ ಅಥವಾ ಬೋನಸ್ ಕೇಳಿಲ್ಲ. ಬೇರೆ ಯಾವುದನ್ನೂ ಅವರು ಕೇಳಿಲ್ಲ. ಅವರು ಮಾಡಿದ ತಪ್ಪು, ಏನೆಂದರೆ 4500 ಜನರು ಸೇರಿ ಟ್ರೇಡ್ ಯೂನಿಯನ್ ರಚನೆ ಮಾಡಬೇಕು ಎಂದು ಹೇಳಿ ಅರ್ಜಿ ಹಾಕಿದ ತಪ್ಪಿಗೆ ಒಂದೇ ಸಮನೆ ಅವರನ್ನು ಸಸ್ಪೆಂಡ್ ಮಾಡುವುದು, ಡಿಸ್‌ಮಿಸ್ ಮಾಡುವುದು ಪ್ರಾರಂಭವಾಯಿತು. ಇದು ಪ್ರಾರಂಭವಾದದ್ದು 1998ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ. ಅವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡತಕ್ಕಂಥವರು ಮಹಿಳೆಯರು. ಶೇಕಡಾ 90 ಭಾಗ ಮಹಿಳೆಯರು ಅಲ್ಲಿ ಕೆಲಸ ಮಾಡುತ್ತಾರೆ. ಅವರೆಲ್ಲರೂ 17 ರಿಂದ 25 ವರ್ಷ ವಯಸ್ಸಿನವರು. ಇಷ್ಟು ಸಣ್ಣ ವಯಸ್ಸಿನ ಮಹಿಳೆಯರು ಅದರಲ್ಲಿ ಕೆಲಸ ಮಾಡುತ್ತಾರೆ. ಇದರಲ್ಲಿ ಉತ್ಪಾದನೆ ಮಾಡತಕ್ಕಂಥ ಸಾಮಾನು ಸರಂಜಾಮುಗಳು ಏನೇನು ಎಂಬುದು ತಮಗೆ ಗೊತ್ತಿದೆ. ಟಿ.ವಿ, ರೆಫ್ರಿಜರೇಟರ್, ಎಲೆಕ್ಟ್ರಾನಿಕ್ ಗೂಡ್ಸ್‌ನ್ನು ಅಲ್ಲಿ ಉತ್ಪಾದನೆ ಮಾಡುತ್ತಾರೆ. ಒಂದು ವರ್ಷಕ್ಕೆ ಅವರಿಗೆ ಮೂರುಸಾವಿರ ಕೋಟಿ ರೂಪಾಯಿಗಳಷ್ಟು ವಹಿವಾಟು ಇದೆ. ಹಾಗಾಗಿ ಪ್ರತಿವರ್ಷ 300 ಕೋಟಿ ರೂ. ಲಾಭ ಬರುತ್ತದೆ. ಇಂತಹ ಒಂದು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ಕಾರ್ಮಿಕರಿಗೆ ಅವರು ಮಾಡಿದ್ದು ಏನೆಂದರೆ, ಇಷ್ಟು ವರ್ಷ ದುಡಿದರೂ ಕೂಡ ಅವರನ್ನು ಪರ್ಮನೆಂಟ್ ಮಾಡುವುದಿಲ್ಲ. ಅದಕ್ಕಿಂತ ಹೆಚ್ಚು ಕ್ರೂರವಾದ ವಿಚಿತ್ರವಾದದ್ದು ಏನು ಎಂದರೆ ಅಲ್ಲಿ ಮಹಿಳಾ ಕಾರ್ಮಿಕರು ಮದುವೆಯಾದ ತಕ್ಷಣ ಆ ಫ್ಯಾಕ್ಟರಿಯಿಂದ ಆ ಮಹಿಳೆಯನ್ನು ಕೆಲಸದಿಂದ ತೆಗೆದುಹಾಕಿಬಿಡುತ್ತಾರೆ. ಮದುವೆಯಾದವರನ್ನು ಅವರು ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲ. ಮದುವೆಯಾದರೆ ತಕ್ಷಣ ಕೆಲಸದಿಂದ ತೆಗೆದುಹಾಕಿಬಿಡುತ್ತಾರೆ. ಒಬ್ಬರನ್ನಾದರೂ, ಹತ್ತು ಪರ್ಸೆಂಟ್ ಕಾರ್ಮಿಕರನ್ನೂ ಕೂಡ ಇದುವರೆಗೂ ಅವರು ಪರ್ಮನೆಂಟ್ ಮಾಡಿಲ್ಲ. ಅಂತಹ ಸಂದರ್ಭದಲ್ಲಿ ಅಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ಕಾರ್ಮಿಕರು ಅವರು ಒಂದು ಸಂಘ ಕಟ್ಟಬೇಕೆಂದು ಹೇಳಿ....

ಅಧ್ಯಕ್ಷರು:— ಮದುವೆಯಾದರೆ ತೆಗೆದುಹಾಕುತ್ತಾರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:— ಹೌದು. ಮದುವೆಯಾದರೆ ಆ ಕಾರ್ಖಾನೆಯಲ್ಲಿ ಅವರು ಕೆಲಸ ಕೊಡುವುದಿಲ್ಲ.

ಅಧ್ಯಕ್ಷರು :— ಅವರೇನು ಟ್ರೈನೀಸಾ ಅಥವಾ ರೆಗ್ಯುಲರ್ ಎಂಪ್ಲಾಯೀಸಾ?

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ:— ರೆಗ್ಯುಲರ್ ಎಂಪ್ಲಾಯೀಸ್ ಅಲ್ಲ. ಅವರು ಯಾರನ್ನೂ ಪರ್ಮನೆಂಟ್ ಮಾಡುವುದಿಲ್ಲ. ಅಪ್ರೆಂಟಿಶಿಪ್ ಎನ್ನತಕ್ಕಂಥ ಹೆಸರಿನಲ್ಲಿ ಅವರು ಇಟ್ಟುಕೊಂಡು ಯಾವತ್ತೂ ಅವರನ್ನು ಅವರು ಪರ್ಮನೆಂಟ್ ಮಾಡುವುದಿಲ್ಲ. ಏಳೆಂಟು ವರ್ಷ ದುಡಿದರೂ ಕೂಡ ಪರ್ಮನೆಂಟ್ ಮಾಡುವುದಿಲ್ಲ. ಅವರನ್ನು ಅಪ್ರೆಂಟೀಸ್ ಆಗಿ ಕೆಲಸ ಮಾಡಿಸಿಕೊಳ್ಳುತ್ತಾರೆ. ಮತ್ತು ಅವರನ್ನು ತೆಗೆದುಹಾಕಿಬಿಡುತ್ತಾರೆ. ಹೀಗಾಗಿ ಇಂತಹ ಒಂದು ಕಿರುಕುಳವನ್ನು ತಡೆಯುವುದಕ್ಕೋಸ್ಕರ ಅವರು ಸಂಘವನ್ನು ಕಟ್ಟಿಕೊಳ್ಳುವುದಕ್ಕೆ ಸಿ.ಐ.ಟಿ.ಯು. ನೇತೃತ್ವದಲ್ಲಿ ಒಂದು ಸಂಘ ಮಾಡುವಾಗ ಅವರನ್ನು ವಜಾ ಮಾಡತಕ್ಕಂಥ ಕೆಲಸ ಪ್ರಾರಂಭವಾಯಿತು. ವಜಾ ಮಾಡತಕ್ಕಂಥ ಸಂದರ್ಭದಲ್ಲಿ 19-11-98 ರಿಂದ ಅವರು ಅನಿರ್ದಿಷ್ಟಕಾಲ ಮುಷ್ಕರ ಹೂಡಿದರು. ಮುಷ್ಕರ ಹೂಡಿ ಸರ್ಕಾರಕ್ಕೆ ಹಲವಾರು ರೀತಿಯ ಅಹವಾಲುಗಳನ್ನು ಕೊಟ್ಟಿದ್ದಾರೆ, ಸಂಬಂಧಪಟ್ಟ ಮಂತ್ರಿಗಳ ಜತೆ ಬಂದು ಮಾತನಾಡಿದ್ದಾರೆ. ಲೇಬರ್ ಕಮೀಷನರ್ ಹತ್ತಿರ ಮಾತನಾಡಿದ್ದಾರೆ. ಅಲ್ಲಿ ಲೇಬರ್ ಕಮೀಷನರ್ ಒಬ್ಬರು ಇದ್ದಾರೆ. ಅವರು ಏಕೆ ಅಲ್ಲಿದ್ದಾರೆ ಎಂದು ನನಗಂತೂ ಅರ್ಥವಾಗುತ್ತಿಲ್ಲ. ಎಲ್ಲರೂ ಕೂಡ, ಕಾರ್ಮಿಕ ಮುಖಂಡರು ಎಲ್ಲರೂ ಹೋಗಿ ಯೂನಿಯನ್ ರಿಜಿಸ್ಟರ್ ಮಾಡುತ್ತೇವೆ ಎಂದರೆ ನಾನು ಅದನ್ನು ಕ್ಯಾನ್ಸಲ್ ಮಾಡುತ್ತೇನೆ ಎನ್ನುವ ರೀತಿಯಲ್ಲಿ ಆ ಲೇಬರ್ ಕಮೀಷನರ್ ಮಾತನಾಡುತ್ತಾರೆ. ಇಂತಹ ಲೇಬರ್ ಕಮೀಷನರ್‌ನ್ನು ಇಂಡಿಯಾ ದೇಶದಲ್ಲಿ ಕರ್ನಾಟಕದ ಇತಿಹಾಸದಲ್ಲಿ, ಯಾರನ್ನೂ ಕೂಡ ಇದುವರೆಗೂ ನಾನು ನೋಡಿಲ್ಲ. ಅವರಿಗೆ ಆ ಅಧಿಕಾರವೇ ಇಲ್ಲ. ಆದರೂ ಅವರು ಹೆದರಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಹೋರಾಟ ನಡೆಯುತ್ತಾ ಇರಬೇಕಾದರೆ ವಿಪರೀತವಾದ ಕಿರುಕುಳ ಪ್ರಾರಂಭವಾಯಿತು. ಲಾಠಿ ಚಾರ್ಜ್ ಮಾಡತಕ್ಕಂಥಾದ್ದು, ರಾತ್ರಿಹೊತ್ತು ಕೆಲಸ ಮಾಡಬೇಕೆಂದು ನಿರ್ಬಂಧ ಮಾಡತಕ್ಕಂಥಾದ್ದು, ಹೋರಾಟ ಮಾಡುವವರ ಮೇಲೆ ಲಾಠಿ ಚಾರ್ಜ್ ಮಾಡತಕ್ಕಂತಾದ್ದು, ಇವೆಲ್ಲವೂ ಪ್ರಾರಂಭವಾಗಿದೆ. ಯಾವುದೇ ಕಾರಣಕ್ಕೆ ಮಾಲೀಕರನ್ನು, ಲೇಬರ್ ಇಲಾಖೆಯವರಾಗಲೀ, ಅಥವಾ ಸರ್ಕಾರವಾಗಲೀ ಒಂದು ದಿವಸವಾದರೂ ಕರೆದು, ಮಾತುಕತೆ ಮಾಡಿ, ಅವರ ಸಮಸ್ಯೆ ಏನಿದೆ, ಎಂಬುದನ್ನು ಕೇಳಿ ಬಗೆಹರಿಸತಕ್ಕ ಪ್ರಯತ್ನವನ್ನೂ ಕೂಡ ಮಾಡಲಿಲ್ಲ. ಅವರು ಇದಕ್ಕಿಂತ ಕ್ರೂರವಾದ ಕೆಲಸ ಮಾಡಿದ್ದು ಎಂದರೆ, 300 ಜನ ಮಹಿಳಾ ಕಾರ್ಮಿಕರನ್ನು ಬೆಳಗಾಂ, ಗುಲ್ಬರ್ಗಾ, ಬಳ್ಳಾರಿ ಜೈಲಿಗೆ ಕಳುಹಿಸಿದ್ದಾರೆ. ಯಾರು ಎಂದರೆ ಪೋಲೀಸಿನವರು. ಪೋಲೀಸಿನವರು ಎಂದರೆ ಸರ್ಕಾರ ತಾನೇ. ಎಂತಹ ವಿಚಿತ್ರ ಪರಿಸ್ಥಿತಿ ಎಂದು ಹೇಳಿದರೆ, ಆ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಒಂದು ಹುಡುಗಿಗೆ ನಿಶ್ಚಿತಾರ್ಥವಾಗಿ, ಮದುವೆ ಕೇವಲ ನಾಲ್ಕು

ದಿವಸ ಇತ್ತು. ಅವರು ಜೈಲಿಗೆ ಹೋದ ಕಾರಣಕ್ಕೋಸ್ಕರ, ಆ ಮದುವೆಯೂ ಕ್ಯಾನ್ಸಲ್ ಆಯಿತು. ಅಂತಹ ಅಮಾನವೀಯವಾದ ಪರಿಸ್ಥಿತಿಯನ್ನು ಈ ಸರ್ಕಾರ ನಿರ್ಮಾಣ ಮಾಡಿದೆ. ನನ್ನ ಜೊತೆ ಸುಮಾರು ಜನ ಇದ್ದಾರೆ, ಆದರೆ ನಿಮ್ಮ ಜೊತೆ ಜನ ಕಡಿಮೆ ಇದ್ದಾರೆ. ಹಾಗಾದರೆ ನೀವು ಯಾರ ಜೊತೆಯಲ್ಲಿದ್ದೀರಿ ಎಂಬುದನ್ನಾದರೂ ಹೇಳಿ. ನೀವು ಮಾಲಿಕರ ಜೊತೆಯಲ್ಲಿದ್ದೀರಾ?

ಶ್ರೀ ಸಿ. ಬೈರೇಗೌಡ:— ನಮಗೆಲ್ಲರಿಗೂ ಮದುವೆಯಾಗಿರುತ್ತದೆ, ಮಕ್ಕಳು ಇದ್ದಾರೆ.

ಶ್ರೀ ಸಿ. ಬೈರೇಗೌಡ :— ಇವರು ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಇವರ ಪಾರ್ಟಿಯ ಸದಸ್ಯರೊಬ್ಬರಿಗೆ ಇದುವರೆಗೂ ಮದುವೆಯಾಗಿಲ್ಲ. ಈಗ ನಿಗದಿಯಾಗಿದೆ. ಇನ್ನು 2-3 ದಿವಸದಲ್ಲಿ ಆಗಬಹುದು. ಅವರು ನನ್ನ ಮೇಲೆ ಹೇಳುತ್ತಿದ್ದಾರೆ. ಇನ್ನೊಬ್ಬ ಸದಸ್ಯರಿಗೆ ಅಂದರೆ ಜಯಣ್ಣ ಎಂಬುವರಿಗೆ ಮದುವೆಯೇ ಆಗಿಲ್ಲ. ಅವರ ಬಗ್ಗೆ ಯಾರೂ ಮಾತನಾಡುವುದೇ ಇಲ್ಲ.

MR. SPEAKER: In this regard, he will take advice from the Treasury Bench.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಈ ರೀತಿಯಾಗಿ ಅಮಾನವೀಯವಾಗಿ ನಡೆದುಕೊಂಡಿರತಕ್ಕ ಸರ್ಕಾರ ಇದು. ಮತ್ತೆ ಈ ಸರ್ಕಾರದಲ್ಲಿ ಯಾರ ಮಾತು ನಡೆಯುತ್ತಾ ಇದೆ ಎಂಬುದೇ ಗೊತ್ತಾಗುವುದಿಲ್ಲ. ಅಂದರೆ, ಈ ಬಿಪಿಎಲ್ ಕಾರ್ಮಿಕರ ಹೋರಾಟ ಪ್ರಾರಂಭವಾದ ಮೇಲೆ, ಮೂರು ಜನ ಕಾರ್ಮಿಕ ಮಂತ್ರಿಗಳು ಬದಲಾವಣೆಯಾದರು. ಮೊದಲಿದ್ದ ಕಾರ್ಮಿಕ ಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರು. ಅವರು ಸುಮಾರು ಸಲ ಪ್ರಯತ್ನ ಮಾಡಿ, ನೆಗೋಷಿಯೇಷನ್‌ಗೆ ಬರದೆ ಒಂದು ಆರ್ಡರ್ ಮಾಡಿದರು. ಈ ರೀತಿ ಆರ್ಡರ್ ಮಾಡಿದ ಫೈಲು ರಾತ್ರೋರಾತ್ರಿ ಚೀಪ್ ಮಿನಿಸ್ಟರ್ ಕಚೇರಿಗೆ ಬರುತ್ತದೆ. ಮತ್ತು ಸಿದ್ದರಾಮಯ್ಯನವರು ಮಾಡಿದ ಆದೇಶವನ್ನು ರದ್ದುಮಾಡಿ, ಇಡೀ ಕಾರ್ಮಿಕರು ಮಾಡುತ್ತಿರತಕ್ಕ ಹೋರಾಟವನ್ನು, ಮುಷ್ಕರವನ್ನು ಬ್ಯಾನ್ ಮಾಡತಕ್ಕ, ನಿಷೇಧ ಮಾಡತಕ್ಕ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ತಾರೀಖು 26-2-99 ರಂದು ಈ ಕಾರ್ಮಿಕರ ಹೋರಾಟವನ್ನು ಬ್ಯಾನ್‌ಮಾಡಿ, ಸರ್ಕಾರ ಒಂದು ಆದೇಶವನ್ನು ಹೊರಡಿಸಿದೆ. ಲೇಬರ್ ಕಾನೂನಿನಲ್ಲಿ ಸ್ಪಷ್ಟವಾಗಿದೆ. Unfair trade practice ಮಾಡಿದವರಿಗೆ ಕನಿಷ್ಟ ಆರು ತಿಂಗಳು ಶಿಕ್ಷೆಯಾಗಬೇಕೆಂದು ಕರ್ನಾಟಕ ಲೇಬರ್ ಆಕ್ಟ್‌ನಲ್ಲಿದೆ. ಅದು ಇವರೇ ತಂದಿರತಕ್ಕ ಕಾನೂನು. ಅನ್‌ಫೇರ್ ಲೇಬರ್ ಪ್ರಾಕ್ಟೀಸ್‌ನಲ್ಲಿ ಸುಮಾರು 20 ಐಟಂ

ಇದೆ. ಅದೆಲ್ಲವನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಎರಡೇ ಎರಡು ವಿಷಯವನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ``Threatening the workmen with the descharge or dismissal if they join the trade union" ಟ್ರೇಡ್ ಯೂನಿಯನ್‌ಗೆ ಸೇರತಕ್ಕಂಥ ಕಾರ್ಮಿಕರಿಗೆ ಯಾರು ಡ್ರೈಟ್ ಮಾಡುತ್ತಾರೆ, ಆ ಮ್ಯಾನೇಜ್‌ಮೆಂಟನ್ನು ಕನಿಷ್ಟ ಆರು ತಿಂಗಳು ಜೈಲಿನಲ್ಲಿಡಬೇಕೆಂದು ಇವರೇ ಮಾಡಿರತಕ್ಕ ಒಂದು ಕಾನೂನು ಇದೆ. ಎರಡನೆಯದು, `Threatening the lock-out or closure if a trade union is organised'. 6 ತಿಂಗಳು ಶಿಕ್ಷೆ. `Granting wage increase to workmen at a crucial stage of trade union with a view to undermining the efforts of of the organisation. ಇದು ಕರ್ನಾಟಕ ಲೇಬರ್ ಆಕ್ಟ್. ಇದು ಕನಿಷ್ಟ ಕಾನೂನು. ಅದೇ ಸಂದರ್ಭದಲ್ಲಿ, ಇವರೇ ಹೊರಡಿಸಿರತಕ್ಕ ಕನಿಷ್ಟ ವೇತನದ ಆಜ್ಞೆ ಏನಿದೆ, ಕನಿಷ್ಟ ಕೂಲಿ ಕೊಡಬೇಕೆಂದು ಹೇಳತಕ್ಕಂಥಾದ್ದು ಆ ಕನಿಷ್ಟ ಕೂಲಿಯ ಆಕ್ಟನ್ನೂ ಕೂಡ ಆ ಮ್ಯಾನೇಜ್‌ಮೆಂಟ್ ಇವತ್ತು ಬೆಂಗಳೂರಿನಲ್ಲಿ ಜಾರಿಮಾಡುತ್ತಾ ಇಲ್ಲ. ಕನಿಷ್ಟವೇತನ 2 ಸಾವಿರ ಕೊಡಬೇಕೆಂದು ಗವರ್ನಮೆಂಟ್ ಆಕ್ಟ್ ಇದೆ. ಅದರಲ್ಲಿ ಅರ್ಧ ಸಂಬಳ ಕೂಡ ಬಿಪಿ.ಎಲ್. ಮಾಲೀಕ ಇವತ್ತು ಕೊಡುತ್ತಾ ಇಲ್ಲ. ಅಂತಹ ಒಬ್ಬ ಮಾಲೀಕನಿಗೆ ರಕ್ಷಣೆ ಮಾಡತಕ್ಕಂಥ, ರಕ್ಷಣೆ ಮಾಡುವುದಕ್ಕೋಸ್ಕರ ಕರ್ನಾಟಕ ರಾಜ್ಯದಲ್ಲಿ ಲೇಬರ್ ಇಲಾಖೆ ಇದೆ. ಅಲ್ಲಿ ಒಬ್ಬರು ಕಮೀಷನರ್ ಇದ್ದಾರೆ, ಅವರು ಯಾವ ದೇಶದಲ್ಲಿ ಹುಟ್ಟಿದರೋ ಎಂಬುದು ನನಗೆ ಗೊತ್ತಾಗುತ್ತಾ ಇಲ್ಲ. ಅವರ ವಿಳಾಸ ಕೂಡ ನನಗೆ ಸರಿಯಾಗಿ ಗೊತ್ತಿಲ್ಲ.

MR. SPEAKER: I have an advice to you. Labour Commissioner is an Officer.

SRI G.V. SRIRAMA REDDY: That officer has given a notice.

MR. SPEAKER: He is not a Member of this House. He cannot defend himself. After all Labour Commission is only a representative of the Government. You level all your charges against the Government. Let the Government defend.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅಧ್ಯಕ್ಷರೇ, ನಾನು ಏಕೆ ಹೇಳುತ್ತಿದ್ದೇನೆಂದರೆ,

ಅಧ್ಯಕ್ಷರು :— ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಎಲೆಕ್ಟೆಡ್ ಗವರ್ನಮೆಂಟ್ ಇದ್ದಾಗ ತಹಶೀಲ್ದಾರ್ ಏನು ಮಾಡಿದರೂ, ಲೇಬರ್ ಕಮೀಷನರ್ ಏನು ಮಾಡಿದರೂ,

ಡೈರಕ್ಟರ್ ಏನು ಮಾಡಿದರೂ, it is construed to be the action of the Government and you are here by your right a a Member, you can take the Government to task. It is the responsibility of the Government to defend themselves. It is a question of courtesy. To accuse a person who cannot defend himself, it will not a fair war.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಹಾಗಾದರೆ ಆ ನೋಟೀಸ್ ಕೊಟ್ಟಿರುವವರ ಬಗ್ಗೆ ಏನು ಹೇಳಬೇಕು?

ಅಧ್ಯಕ್ಷರು :— ಸರ್ಕಾರದಿಂದ ಎಂದು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಸರ್ಕಾರ ಅದನ್ನು ನೇರವಾಗಿ ಕೊಟ್ಟಿಲ್ಲ. ಸರ್ಕಾರ ಯಾವತ್ತೂ ನೇರವಾಗಿ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ :— ಅದು ಕಾನೂನಿಗೆ ಬದ್ಧವಾಗಿದೆಯೇ ಅಥವಾ ಕಾನೂನಿಗೆ ವಿರೋಧವಾಗಿದೆಯೇ?

ಅಧ್ಯಕ್ಷರು :— ಕಾನೂನಿಗೆ ವಿರೋಧವಾಗಿದ್ದರೂ ಕೂಡ, I would ನೀವು ಅಬ್ಜಕ್ಷನ್ ಥ್ರೋ ಮಾಡಬೇಕಾಗಿತ್ತು, ನೀವು ಯಾರೂ ಮಾಡಲಿಲ್ಲ. Then, I had to do it.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನೀವು ಅವರ ರಕ್ಷಣೆಗೆ ಬಂದರೆ ಏನೂ ತೊಂದರೆ ಇಲ್ಲ.

ಅಧ್ಯಕ್ಷರು :— ಅವರ ಕಡೆಗೆ ಏನೂ ಇಲ್ಲ. ನಾನು ಯಾರೊಬ್ಬ ಮನುಷ್ಯ ತನ್ನನ್ನು ತಾನು ಡಿಪೆಂಡ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಅವರಿಗೆ ನಾನು ರಕ್ಷಣೆ ಕೊಡಲೇಬೇಕಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಹಾಗಾದರೆ, ಈ ನೋಟೀಸನ್ನು ಸರ್ಕಾರದ ಹೆಸರಿನಲ್ಲಿ ತಂದಿಲ್ಲ. ಅದು ಬಂದಿರತಕ್ಕ ಸಮಸ್ಯೆ. ಅದಕ್ಕಾಗಿ ನಾನು ಲೇಬರ್ ಕಮೀಷನರ್ ಎಂದು ಹೇಳುತ್ತಾ ಇರುವುದು. ಅದು ಬೇಡ ಎಂದರೆ ಬೇಡ. ಅವರು ನೋಟೀಸ್ ಕೊಡುತ್ತಾರೆ. ಅದೇನೆಂದರೆ, Threatening to derecognise the union, it is totally illegal. ಯಾವುದೇ ಕಾನೂನಿನಲ್ಲಿ ಇಲ್ಲ. ಸೆಂಟ್ರಲ್ ಲೇಬರ್ ಆಕ್ಟ್‌ನಲ್ಲೂ ಇಲ್ಲ, ಕರ್ನಾಟಕ ಲೇಬರ್ ಆಕ್ಟ್‌ನಲ್ಲೂ ಇಲ್ಲ. ಡೀ ರೆಕಗ್ನೈಸ್ ಮಾಡುತ್ತೇವೆಂದು ನೋಟೀಸ್ ಕೊಡುವುದಕ್ಕೂ ಕೂಡ ಅವರಿಗೆ ಅಧಿಕಾರ ಇಲ್ಲ. ಸರ್ಕಾರವಾಗಲೀ

ಅಥವಾ ಯಾರಿಗೂ ಕೂಡ ಆ ಅಧಿಕಾರ ಇಲ್ಲ. ಆದರೂ ಕೂಡ ನೋಟೀಸ್ ಕೊಡುತ್ತಾರೆ. ನೋಟೀಸ್ ಕೊಟ್ಟು ಇಷ್ಟೆಲ್ಲಾ ಆದಮೇಲೂ ಕೂಡ, ಮುಷ್ಕರ ಪ್ರಾರಂಭವಾದ ಮೇಲೆ, ನೂರಾರು ಜನ ಕಾರ್ಮಿಕರನ್ನು ಆ ಫ್ಯಾಕ್ಟರಿಯಿಂದ ಡಿಸ್‌ಮಿಸ್ ಮಾಡಿದ್ದಾರೆ, ಸಸ್ಪೆಂಡ್ ಮಾಡಿದ್ದಾರೆ. ನೋಟೀಸ್ ಕೊಟ್ಟಿದ್ದಾರೆ, ಕ್ರಿಮಿನಲ್ ಕೇಸನ್ನು ಹಾಕಿದ್ದಾರೆ. ಯಾವ ಕಾರಣಕ್ಕೋಸ್ಕರ ಈ ರೀತಿ ಮಾಡಿದ್ದಾರೆ? ಕನಿಷ್ಟ ನಮಗೆ ಸಂಬಳ ಜಾಸ್ತಿ ಕೊಡಿ ಎಂದು ಹೇಳಿ, ಸರ್ಕಾರಕ್ಕೆ ಬರ್ಡನ್ ಆಗತಕ್ಕ ರೀತಿಯಲ್ಲಿ ಒತ್ತಾಯ ಮಾಡಿಲ್ಲ. ಅಥವಾ ಮ್ಯಾನೇಜ್‌ಮೆಂಟ್ ಮೇಲೂ ಬೋನಸ್ ಅಥವಾ ಸಂಬಳದ ಬಗ್ಗೆ ಹೋರಾಟ ಮಾಡಲಿಲ್ಲ, ಡಿಮ್ಯಾಂಡ್ ಇಡಲಿಲ್ಲ. ಯೂನಿಯನ್ ರಕ್ಷಣೆ ಮಾಡಿಕೊಳ್ಳತಕ್ಕಂತಾದ್ದೇ ಅಪರಾಧ ಎಂಬ ದೃಷ್ಟಿಯಲ್ಲಿ, ಇವತ್ತು ಕಾರ್ಮಿಕರನ್ನು ಈ ರೀತಿಯಾಗಿ ದಮನ ಮಾಡತಕ್ಕಂತಾದ್ದೇ ಅಪರಾಧ ಎಂಬ ದೃಷ್ಟಿಯಲ್ಲಿ, ಇವತ್ತು ಕಾರ್ಮಿಕನ್ನು ಈ ರೀತಿಯಾಗಿ ದಮನ ಮಾಡತಕ್ಕಂಥಾದ್ದು, ಕಾರ್ಮಿಕರ ಹೋರಾಟವನ್ನು ದಮನ ಮಾಡತಕ್ಕಂಥಾದ್ದು ಅವರ ಹಕ್ಕುಗಳನ್ನು ದಮನ ಮಾಡತಕ್ಕಂಥಾದ್ದು ನಿರಂತರವಾಗಿ ಕರ್ನಾಟಕರಾಜ್ಯದಲ್ಲಿ ಇವತ್ತು ನಡೆಯುತ್ತಾ ಇದೆ. ಇವತ್ತು ಅವರು ಪ್ರತಿಭಟನೆ ಮಾಡಬೇಕೆಂದು ಮೈಸೂರು ಬ್ಯಾಂಕ್ ವೃತ್ತದಿಂದ ಮೆರವಣಿಗೆ ಹೊರಟರೆ, ಕೆ.ಆರ್. ಸರ್ಕಲ್‌ಗೂ ಬಿಡುವುದಿಲ್ಲ, ನಿಮ್ಮನ್ನು ಎಲ್ಲಿಗೂ ಬಿಡುವುದಿಲ್ಲವೆಂದು ಪೋಲೀಸಿನವರು ನಿರ್ಬಂಧ ಹಾಕುತ್ತಾರೆ. ನಿರಂತರವಾಗಿ ಪೋಲೀಸಿನವರ ಹಸ್ತಕ್ಷೇಪ. ಕಾರ್ಮಿಕರ ಹೋರಾಟದಲ್ಲಿ ನಡೆಯತಕ್ಕಂಥಾದ್ದು ಪೋಲೀಸಿನವರ ಕುಮ್ಮಕ್ಕು ನೇರವಾಗಿ ಇದೆ. ಈ ಬಿ.ಪಿ.ಎಲ್. ಫ್ಯಾಕ್ಟರಿಯ 14 ಯೂನಿಟ್‌ಗಳು ಇವೆ. ಬೆಂಗಳೂರು ನಗರದಲ್ಲಿ ಒಂದೇ ಕಡೆ ಇಲ್ಲ. ದೊಡ್ಡಬಳ್ಳಾಪುರದಲ್ಲೂ ಒಂದು ಯೂನಿಟ್ ಇದೆ. ಬೆಂಗಳೂರು ಸುತ್ತಮುತ್ತ ಹಲವಾರು ಪ್ರದೇಶಗಳಲ್ಲಿ ಆ ಯೂನಿಟ್‌ಗಳು ಇವೆ. ಆ ಯೂನಿಟ್‌ಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರನ್ನು ಪೋಲೀಸಿನವರು ಹೋಗಿ, ಪ್ರತಿ ದಿವಸ ಥ್ರೆಟ್ ಮಾಡುವುದು. ನೀವೇನಾದರೂ ಯೂನಿಯನ್‌ಗೆ ಸೇರಿದರೆ ನಿಮ್ಮನ್ನು ಅರೆಸ್ಟ್ ಮಾಡುತ್ತೇವೆ ಮತ್ತು ಜೈಲಿಗೆ ಕಳುಹಿಸುತ್ತೇವೆಂದು ಹೇಳುವುದು. ಇಷ್ಟೆಲ್ಲಾ ನಡೆಯುತ್ತಿರತಕ್ಕ ಸಂದರ್ಭದಲ್ಲಿ ಸರ್ಕಾರದ ಜೊತೆ ಮಾತುಕತೆ ಮಾಡಬೇಕೆಂದು ಮುಖ್ಯಮಂತ್ರಿಗಳ ಮನೆ ಮುಂದೆ ಧರಣಿ ಮಾಡಿದರು. ಸರ್ಕಾರದ ಪರವಾಗಿ ಅಲ್ಲಿಗೆ ಬಂದಿದ್ದ ಮಂತ್ರಿಗಳು ಆಶ್ವಾಸನೆ ಕೊಟ್ಟರು. ನಾನು ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ, ಪರಿಹಾರ ಮಾಡುತ್ತೇನೆಂದು ಆಶ್ವಾಸನೆ ಕೊಟ್ಟರು. ಆದರೆ, ಮುಖ್ಯಮಂತ್ರಿಗಳು ಮಾತುಕತೆಗೇ ಬರಲಿಲ್ಲ. ಇಷ್ಟೆಲ್ಲಾ ನಡೆಯುತ್ತಾ ಇರಬೇಕಾದರೆ, ಆಗಿನ ಕಾರ್ಮಿಕ ಮಂತ್ರಿಗಳಾದ ಸಿದ್ಧರಾಮಯ್ಯನವರು ಆ ದಿನ ಒಂದು ಆದೇಶವನ್ನು ಹೊರಡಿಸಿದರು. ಈ ರೀತಿ ಆದೇಶ ಮಾಡಿದ ಫೈಲನ್ನು ತರಿಸಿಕೊಂಡು ರಾತ್ರೋರಾತ್ರಿ ಇವರು ರದ್ದು ಮಾಡಿದರು. ಮತ್ತೆ ಬಿ.ಎಲ್. ಶಂಕರ್‌ರವರು ಕಾರ್ಮಿಕ ಮಂತ್ರಿಗಳಾದ ಮೇಲೆ, ನೆಗೋಷಿಯೇಟ್ ಮಾಡಲಿಕ್ಕೆ ಪ್ರಯತ್ನ ಮಾಡಿದರು.

ಆದರೆ, ನೆಗೋಷಿಯೇಷನ್ ಮಾಡಲಿಕ್ಕೆ ಯಾವುದೇ ಸಂದರ್ಭದಲ್ಲಿ ಮ್ಯಾನೇಜ್‌ಮೆಂಟ್‌ನವರು ಬರುವುದೇ ಇಲ್ಲ. ಲೇಬರ್ ಕಮೀಷನರ್ ನೆಗೋಷಿಯೇಷನ್‌ಗೆ ಕರೆಯುವುದೇ ಇಲ್ಲ. ಕಾರ್ಮಿಕ ಮಂತ್ರಿಗಳು ಎರಡು ಸಲ ಕರೆದರು, ಸಿದ್ದರಾಮಯ್ಯನವರೂ ಕರೆದರು ಮತ್ತೆ ಬಿ.ಎಲ್. ಶಂಕರ್‌ರವರೂ ಕರೆದರು. ಆಗಲೂ ಕೂಡ ಅವರು ನೆಗೋಷಿಯೇಷನ್‌ಗೆ ಬರಲಿಲ್ಲ. ಯಾವುದೇ ರೀತಿಯ ಕನ್ಸಿಲೇಷನ್‌ಗೆ ಬರಲಿಲ್ಲ. ಇಷ್ಟೆಲ್ಲವನ್ನೂ ಸರಕಾರದ ಮುಂದಿಟ್ಟರೂ ಕೂಡ, ಯಾವುದೇ ಸಮಸ್ಯೆಯನ್ನು ಪರಿಹಾರ ಮಾಡದೆ, ಕನಿಷ್ಟಪಕ್ಷ ಕಾರ್ಮಿಕರನ್ನು ಮತ್ತು ಮೇನೇಜ್‌ಮೆಂಟ್‌ನವರನ್ನು ಕರೆಸಿ, ಸಮಸ್ಯೆಗಳನ್ನು ಪರಿಹಾರ ಮಾಡಲು ಸರಕಾರದವರು ಯಾವುದೇ ರೀತಿಯ ಪ್ರಯತ್ನಗಳನ್ನು ಮಾಡಲಿಲ್ಲ. ಹೀಗೆ ಪ್ರಯತ್ನ ಮಾಡದೇ ಇರುವ ಜೊತೆಗೆ ಮೇನೇಜ್‌ಮೆಂಟ್‌ನವರ ಜೊತೆಗೆ ಶಾಮೀಲಾಗಿದ್ದಾರೆ. ಬಿ.ಪಿ.ಎಲ್. ಮನೇಜ್‌ಮೆಂಟ್‌ನವರ ಜೊತೆಗೆ ಶಾಮೀಲಾಗಿ, ಆ ಕಂಪನಿಯ ಮಾಲೀಕರು ಯಾರಿದ್ದಾರೋ ಅವರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಕಾನೂನುಗಳನ್ನು ಮಾಡುವಂಥಾದ್ದು ಮತ್ತು ಅರೀತಿಯಾದಂಥ ಆಜ್ಞೆಗಳನ್ನು ಹೊರಡಿಸುವಂಥಾದ್ದು ಆಯಿತು. 26-2-99 ರಂದು ನೀವು ಅವರ ಸ್ಟೈಕ್ ಬ್ಯಾನ್ ಮಾಡಿದ್ದೀರಿ. ಈ ಆಜ್ಞೆಯನ್ನು ಹೊರಡಿಸುವುದಕ್ಕೆ ಮೊದಲು ನಾವು ಮಾನ್ಯ ಬಿ.ಎಲ್. ಶಂಕರ್‌ರವರ ಜೊತೆಗೆ ಮಾತನಾಡಿದ್ದೆ. ನೀವು ಹೊಸದಾಗಿ ಕಾರ್ಮಿಕ ಮಂತ್ರಿಗಳಾಗಿದ್ದೀರಿ, ಈ ರೀತಿಯಾದಂಥ ಆಜ್ಞೆಗಳನ್ನು ಹೊರಡಿಸಬೇಡಿ ಎಂದು ಕೇಳಿಕೊಂಡೆ. ಅದಕ್ಕೆ ಉತ್ತರವಾಗಿ ಅವರು ಸ್ಟೈಕ್ ಮತ್ತು ಮೆನೇಜ್‌ಮೆಂಟ್‌ನವರು ಲಾಕ್‌ಔಟ್ ಮಾಡಿರುವುದನ್ನು ಕೂಡ ಬ್ಯಾನ್ ಮಾಡುತ್ತೇವೆ ಎಂದು ಹೇಳಿದರು. ಇಲ್ಲಿ ಈ ರೀತಿಯಾದಂಥ ಆಜ್ಞೆಯನ್ನು 26-2-99ರಂದು ಹೊರಡಿಸುವಾಗ ಏನು ಮಾಡಿದ್ದಾರೆ ಅಂದರೆ, ಮೆನೇಜ್ ಮೆಂಟ್‌ನವರು ಲಾಕ್‌ಔಟ್ ಮಾಡಿರುವುದು ಕಾನೂನಿಗೆ ವಿರೋಧ ಎಂಬುದನ್ನು ಉಲ್ಲೇಖ ಮಾಡಿಲ್ಲ. ಅದನ್ನು ನಿಷೇಧ ಮಾಡಲಿಲ್ಲ. ಈ ಆಜ್ಞೆಯಲ್ಲಿ ಈ ರೀತಿಯಲ್ಲಿ ನಮುದಿಸಿದ್ದಾರೆ. "ಈ ಮಧ್ಯೆ ಆಡಳಿತ ವರ್ಗದವರಾದ ಮೇಸರ್ಸ್ ಬಿ.ಪಿ.ಎಲ್. (ಲಿ) ಬೆಂಗಳೂರು, ಇವರ ವಿರುದ್ಧ, ಒಂದು ಶಾಖೆಯನ್ನು ಪ್ರತಿನಿಧಿಸುವ ಬಿಪಿಎಲ್ ಗ್ರೂಪ್ ಆಫ್ ಕಂಪನಿಗಳ ಕಾರ್ಮಿಕ ಸಂಘವು ಕಾನೂನು ಬಾಹಿರ ಹಾಗೂ ನ್ಯಾಯ ಬಾಹಿರವಾಗಿ ಬೇಡಿಕೆಗಳ ಪಟ್ಟಿ ಇತ್ಯರ್ಥಕ್ಕಾಗಿ ಒತ್ತಾಯಿಸಿ ದಿನಾಂಕ: 19-11-1998 ರಿಂದ ಪ್ರಾರಂಭಿಸಿರುವ ಮುಷ್ಕರವನ್ನು ಮುಂದುವರಿಸುತ್ತಿದ್ದು ಕೈಗಾರಿಕಾ ಶಾಂತಿಯನ್ನು ಕಾಪಾಡಿಕೊಂಡು ಹೋಗುವ ದೃಷ್ಟಿಯಿಂದ ಕೈಗಾರಿಕಾ ವಿವಾದ ಕಾಯಿದೆ 1947ರ ಕಲಂ-10,-3ರ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಕಾರ್ಮಿಕ ವರ್ಗದವರು ಮುಂದುವರಿಸುತ್ತಿರುವ ಮುಷ್ಕರವನ್ನು ಈ ತಕ್ಷಣದಿಂದ ಜಾರಿಗೆ ಬರುವ ಹಾಗೆ ನಿಷೇಧಿಸಲಾಗಿದೆ" ಅಂದರೆ ಇವರು ಲಾಕ್‌ಔಟ್‌ನ್ನು ನಿಷೇಧ ಮಾಡಿಲ್ಲ. ಲಾಕ್‌ಔಟ್‌ನ್ನು ಮತ್ತು ಸ್ಟೈಕ್ ಎರಡನ್ನೂ ನಿಷೇಧ ಮಾಡುತ್ತೇವೆ ಎಂದು ಹೇಳಿದವರು ಕೇವಲ ಸ್ಟೈಕ್‌ನ್ನು ಮಾತ್ರ ನಿಷೇಧಮಾಡಿ ಆಜ್ಞೆಯನ್ನು

ಹೊರಡಿಸಿದ್ದಾರೆ. ಈ ಮಧ್ಯೆ ಸರಕಾರದವರ ಜೊತೆ ಮಾತನಾಡತಕ್ಕಂಥ ಸಂದರ್ಭದಲ್ಲಿ ನಾವು ಮಾತುಕತೆಗಳ ಮೂಲಕ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೂ ಯಾವುದೇ ಪರಿಹಾರವನ್ನು ಮಾಡಿಲ್ಲ. ರಾಜ್ಯದಲ್ಲಿ ಜನತಾದಳ ಸರಕಾರವು ಅಸ್ತಿತ್ವಕ್ಕೆ ಬಂದ ಮೇಲೆ ಕಾರ್ಮಿಕರ ಹೋರಾಟಕ್ಕೆ ಅವರ ಸಮಸ್ಯೆಗಳಿಗೆ ಸ್ಪಂಧಿಸಿಲ್ಲ ಮತ್ತು ಅವರ ಹೋರಾಟಕ್ಕೆ ಕನಿಷ್ಟ ಬೆಂಬಲವನ್ನೂ ಕೂಡ ಕೊಟ್ಟಿಲ್ಲ. ಅವರ ಸಮಸ್ಯೆಗಳನ್ನು ಪರಿಹಾರ ಮಾಡಲು ಪ್ರಯತ್ನವನ್ನು ಮಾಡಿಲ್ಲ. ತಮಗೆ ಗೊತ್ತಿರುವ ಹಾಗೆ ಗಾರ್ಮೆಂಟ್ ಕೆಲಸಗಾರರ ಸಮಸ್ಯೆಗಳ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿದೆ. ಬೇರೆ ಬೇರೆ ಅಸಂಘಟಿತ ಕಾರ್ಮಿಕರುಗಳ ಹೋರಾಟದ ಬಗ್ಗೆ ಅವರ ಸಮಸ್ಯೆಗಳ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆದರೆ ಯಾವುದೇ ಸಂದರ್ಭದಲ್ಲಿಯೂ ಕೂಡ ಕಾರ್ಮಿಕರ ಪರವಾದ ಒಂದೇ ಒಂದು ನಿಲುವನ್ನೂ ಕೂಡ ಸರಕಾರದವರು ತೆಗೆದುಕೊಂಡಿಲ್ಲ. ಕಾರ್ಮಿಕರ ಪರವಾದ ನಿಲುವನ್ನು ತೆಗೆದುಕೊಳ್ಳಲು ನಿಮ್ಮಿಂದ ಸಾಧ್ಯವಿಲ್ಲ. ನಿಮ್ಮ ಇತಿಮಿತಿಗಳು ಮತ್ತು ನೀವು ಯಾರ ಪರವಾಗಿ ಇದ್ದೀರಿ ಎಂಬ ವಿಚಾರವೂ ನಮಗೆ ಗೊತ್ತಿದೆ. ಕನಿಷ್ಟ ಕಾರ್ಮಿಕರಿಗೆ ತೊಂದರೆಯಾದರೂ ಉಂಟು ಮಾಡದ ರೀತಿಯಲ್ಲಿ ಈ ಸರಕಾರ ಯಾವುದೇ ಪ್ರಯತ್ನವನ್ನು ಮಾಡಿಲ್ಲ. ನೀವೇ ಮಾಡಿರತಕ್ಕಂಥ ಕಾರ್ಮಿಕ ಕಾನೂನುಗಳನ್ನು ನೀವು ಏನು ಮಾಡಿದ್ದೀರಿ? ಪೋಲೀಸ್ ಹಾಗೂ ಕಾರ್ಮಿಕ ಕಾನೂನುಗಳನ್ನು ಪರಿಪಾಲನೆ ಮಾಡಲು ನಿಮ್ಮಿಂದ ಸಾಧ್ಯವಾಗಲಿಲ್ಲ. ನೀವೇ ಮಾಡಿದ ಕಾನೂನುಗಳನ್ನು ಗೌರವಿಸುವಂಥ ಕೆಲಸವನ್ನು ಮಾಡಲು ಪ್ರಯತ್ನಿಸಿಲ್ಲ. ಹೀಗಾಗಿ 4500 ಜನ ಕಾರ್ಮಿಕರು ಇವೊತ್ತು ಬೀದಿಪಾಲಾಗಿದ್ದಾರೆ. ಅದರಲ್ಲಿ ಸುಮಾರು 2000 ಜನ ಕಾರ್ಮಿಕರನ್ನು ಡಿಸ್‌ಮಿಸ್ ಮಾಡಿರುವುದು ಮತ್ತು ಸಸ್ಪೆಂಡ್‌ಮಾಡಿರುವುದು ನಡೆದಿದೆ. ಆ ಕ್ರಮವು ಕಾನೂನು ಬಾಹಿರವಾದುದು. ಯಾವ ಕಾರಣಕ್ಕಾಗಿ ನೀವು ಅವರನ್ನು ಸಸ್ಪೆಂಡ್ ಅಥವಾ ಡಿಸ್‌ಮಿಸ್ ಮಾಡಿದ್ದೀರಿ? ಹೀಗೆ ಸಸ್ಪೆಂಡ್ ಮಾಡುವಾಗ ಯಾವುದೇ ಕಾನೂನು ಕ್ರಮಗಳನ್ನು ಅನುಸರಿಸದೇ ಅದನ್ನು ಪರಿಪಾಲನೆ ಮಾಡದೆ ಸಸ್ಪೆಂಡ್ ಮಾಡಿದ್ದಾರೆ. ಕಾರ್ಮಿಕರು ಯಾವುದಾದರೂ ಕ್ರಿಮಿನಲ್ ಆಕ್ಟಿವಿಟೀಸ್‌ನಲ್ಲಿ ಭಾಗವಹಿಸಿದ್ದರೆ ಅಥವಾ ಬೇರೆ ಯಾವುದಾದರೂ ಅಪಾದನೆಗಳು ಅವರ ಮೇಲೆ ಇತ್ತೇ? ಯಾವ ಕಾರಣಕ್ಕಾಗಿ ನೀವು ಅವರನ್ನು ಸಸ್ಪೆಂಡ್‌ಮಾಡಿದ್ದೀರಿ? ಡಿಸ್‌ಮಿಸ್ ಮಾಡಿದ್ದೀರಿ? ಇದಕ್ಕೆ ಕಾರ್ಮಿಕ ಇಲಾಖೆಯಿಂದ ಅಥವಾ ಸರಕಾರದಿಂದ ಸಮರ್ಪಕವಾದ ಉತ್ತರವಾಗಲೀ, ಪರಿಹಾರವಾಗಲೀ ಇವೊತ್ತಿನವರೆವಿಗೂ ದೊರೆತಿಲ್ಲ. ಯಾವ ಸರಕಾರವು ತಾನು ಮಾಡಿದ ಕಾನೂನುಗಳನ್ನು ಪಾಲನೆ ಮಾಡಬೇಕಾಗಿತ್ತೋ, ಆ ಕಾನೂನು ರಕ್ಷಣೆಯನ್ನು ಮಾಡಬೇಕಾಗಿತ್ತೋ ಅಂಥ ಸರಕಾರವು ತಾನೇ ಕಾನೂನುಗಳನ್ನು ಉಲ್ಲಂಘನೆ ಮಾಡಿದೆ. ತಾನೇ ಮಾಡಿದ ಕಾನೂನುಗಳಿಗೆ ಅಗೌರವ ಸೂಚಿಸಿದೆ. ಆದುದರಿಂದ ಅಂಥ ಸರಕಾರಕ್ಕೆ ಅಧಿಕಾರ ನಡೆಸತಕ್ಕಂಥ ನೈತಿಕ ಹಕ್ಕು ಇಲ್ಲ. ಅದರ

ಜೊತೆಗೆ ಕಾರ್ಮಿಕರ ನ್ಯಾಯಯುತವಾದ ಬೇಡಿಕೆಗಳು ಏನಿವೆ?, ಅವರುಗಳು ಕಾನೂನು ಬಾಹಿರವಾದ ಬೇಡಿಕೆಗಳನ್ನು ಇಟ್ಟಿಲ್ಲ. ಇಲ್ಲಿ ಕುಳಿತಿರುವ ಮಾಜಿ ಕಾರ್ಮಿಕ ಸಚಿವರಿಗೂ ಅವರೆ ಸತ್ಯನಾರಾಯಣರವರಿಗೂ ಸಹ ಈ ವಿಚಾರವು ಚೆನ್ನಾಗಿ ಗೊತ್ತಿದೆ. ಇವೊತ್ತು ಬೆಂಗಳೂರು ನಗರದಲ್ಲಿ ಅಸಂಘಟಿತ ಕಾರ್ಮಿಕರು, ಕಾರ್ಮಿಕರು ಹೋರಾಟ ಮಾಡಿದರೆ, ನಿಮ್ಮ ಇತಿಮಿತಿಯೊಳಗೆ, ಕಾನೂನಿನ ವ್ಯಾಪ್ತಿಯೊಳಗೆ ಪರಿಹಾರ ಮಾಡಲು ಸಾಧ್ಯವಿದ್ದರೆ ಮಾಡಬಹುದು, ಇಲ್ಲವಾದಲ್ಲಿ ಬಿಡಬಹುದು. ಕನಿಷ್ಟ ಸೌಜನ್ಯಕ್ಕಾದರೂ ಕಾರ್ಮಿಕರನ್ನು ಮತ್ತು ಮಾಲೀಕರನ್ನು ಒಂದು ಕಡೆ ಕೂರಿಸಿ, ಸಮಸ್ಯೆ ಏನಿದೆ ಎಂದು ತಿಳಿದು ಅದನ್ನು ಪರಿಹಾರ ಮಾಡಲು ಸಾಧ್ಯವೋ ಅಸಾಧ್ಯವೋ ಎಂಬುದನ್ನು ತಿಳಿದುಕೊಂಡು ಚರ್ಚೆ ಮಾಡುವ ಕನಿಷ್ಟ ಜವಾಬ್ದಾರಿಯನ್ನು ಕೂಡ ಹೊರಲಾರದ ಬೇಜವಾಬ್ದಾರಿ ಸರಕಾರ ಇದು. ಅದೇ ರೀತಿಯಲ್ಲಿ ಅಸೌಜನ್ಯಯುತವಾಗಿ ವರ್ತನೆ ಮಾಡುವಂಥ ಸರಕಾರವಿದಾಗಿದೆ. ಇದರ ಜೊತೆಗೆ ಕಾರ್ಮಿಕರ ಮೇಲೆ ದೌರ್ಜನ್ಯವನ್ನು ಕೂಡ ಮಾಡುತ್ತಿದ್ದಾರೆ. ಪೋಲೀಸರು ಹಸ್ತಕ್ಷೇಪ ಮಾಡುತ್ತಿದ್ದಾರೆ. ಯಾವುದೇ ಫ್ಯಾಕ್ಟರಿಗಳಲ್ಲಿ ಏನಾದರೂ ಇಂಥ ಪರಿಸ್ಥಿತಿ ಬಂದಾಗ ಪೋಲೀಸರನ್ನು ಚೂ ಬಿಡುತ್ತಾರೆ. ಇದೇ ರೀತಿಯಲ್ಲಿ ಕಾರ್ಮಿಕರ ಮೇಲೆ ಪೋಲೀಸರನ್ನು ಛೂ ಬಿಡುತ್ತಿದ್ದ ಸಂದರ್ಭದಲ್ಲಿ ಹೈಕೋರ್ಟ್ ಅವರಿಗೆ ಸ್ಪಷ್ಟವಾದ ನಿರ್ದೇಶನವನ್ನು ನೀಡಿತು. ಕಾರ್ಮಿಕರ ಹೋರಾಟದಲ್ಲಿ ಯಾವುದೇ ಕಾರಣಕ್ಕೂ ಪೋಲೀಸರ ಹಸ್ತಕ್ಷೇಪವನ್ನು ತರಬಾರದು ಎಂದು ಹೇಳಿದೆ. ಹೀಗೆ ಕಾನೂನು ರಕ್ಷಣೆ ಇದ್ದರೂ ಕೂಡ ಪೋಲೀಸರ ಮೂಲಕ ಹೋರಾಟವನ್ನು ಮುರಿಯತಕ್ಕಂಥಾದ್ದು ನಡೆಯುತ್ತಾ ಇದೆ. ಕಾರ್ಮಿಕರಿಗೆ ಕಾನೂನು ಬದ್ಧವಾಗಿ ಸಂಘ ರಚನೆ ಮಾಡುವಂಥ ಹಕ್ಕು ಇದೆ. ಅದನ್ನು ರಕ್ಷಣೆ ಮಾಡುವ ಜವಾಬ್ದಾರಿಯನ್ನು ಸರಕಾರ ಹೊರಬೇಕಾಗುತ್ತದೆ. ಕಾರ್ಮಿಕರ ಬೇಡಿಕೆಗಳು ನ್ಯಾಯಯುತವಾಗಿದ್ದರೆ ತತ್‌ಕ್ಷಣ ಮೆನೇಜ್‌ಮೆಂಟ್‌ನವರನ್ನು ಕರೆಸಿ ಇತ್ಯರ್ಥ ಮಾಡುವ ಕೆಲಸವನ್ನು ಮಾಡಬೇಕು. ಅಂತೆಯೇ ಡಿಸ್‌ಮಿಸ್ ಮಾಡಿರುವ, ಸಸ್ಪೆಂಡ್‌ಮಾಡಿರುವ ಕಾರ್ಮಿಕರನ್ನು ಕೂಡಲೇ ವಾಪಸ್ ಕೆಲಸಕ್ಕೆ ತೆಗೆದುಕೊಳ್ಳಬೇಕು. ಹಾಗೆಯೇ ಕಾರ್ಮಿಕರ ಮೇಲೆ ಹಾಕಿರತಕ್ಕಂಥ ಎಲ್ಲಾ ಪೋಲೀಸ್ ಕೇಸ್‌ಗಳನ್ನು ವಾಪಸ್ ಪಡೆಯಬೇಕೆಂದು ತಮ್ಮ ಮೂಲಕ ನಾನು ಒತ್ತಾಯಿಸುತ್ತಾ ಇದ್ದೇನೆ. ಅದಕ್ಕೆ ಸಮರ್ಪಕವಾದ ಉತ್ತರವನ್ನು ಬಯಸುತ್ತಾ, ಕಾರ್ಮಿಕರ ಸಮಸ್ಯೆಗಳನ್ನು ಕೂಡಲೇ ಪರಿಹರಿಸಬೇಕೆಂದು ಕೇಳಿಕೊಳ್ಳುತ್ತಾ ಸರಕಾರವನ್ನು ಒತ್ತಾಯಿಸುತ್ತೇನೆ.

+ ಶ್ರೀ ಎನ್. ರಾಜಣ್ಣ (ಭಾರತೀನಗರ್) :— ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರ ಮಾತುಗಳಿಗೆ ಧ್ವನಿಗೂಡಿಸುತ್ತಾ ನನ್ನ ಕ್ಷೇತ್ರದಲ್ಲಿರುವ ಒಂದು ಸಾವಿರದಷ್ಟು ಬಿಪಿಎಲ್ ಕಾರ್ಮಿಕರ ಕುರಿತು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆ ಕಾರ್ಮಿಕರ ತೊಂದರೆಗಳನ್ನು ಹೇಳಲು ಆಗುವುದಿಲ್ಲ. ಅವರು ತುಂಬಾ ಕಷ್ಟಸ್ಥಿತಿಯಲ್ಲಿದ್ದಾರೆ.

ಇವರ ಸಮಸ್ಯೆಗಳು ಪರಿಹಾರ ಕಾಣುತ್ತವೊ ಇಲ್ಲವೋ ಎಂಬ ವ್ಯಥೆ ನನಗಿದೆ. ನಮ್ಮ ಸರಕಾರದವರು ಆದಷ್ಟು ಬೇಗನೆ ಸಾವಿರಾರು ಜನ ಕಾರ್ಮಿಕರು ಬೀದಿಪಾಲಾಗಿರುವುದನ್ನು ತಪ್ಪಿಸಿ ಅವರು ತಮ್ಮ ಕೆಲಸಕ್ಕೆ ಪುನಃ ಹಿಂದಿರುಗಿ ಹೋಗುವ ಹಾಗೆ ಮಾಡಬೇಕು. ಫ್ಯಾಕ್ಟರಿ ಮಾಲೀಕರುಗಳ ದಬ್ಬಾಳಿಕೆಯು ಬೆಂಗಳೂರಿನಲ್ಲಿ ಜಾಸ್ತಿಯಾಗಿದೆ. ಮೆಟಲ್ ಲ್ಯಾಂಪ್ ಫ್ಯಾಕ್ಟರಿನಲ್ಲೂ ಅದೇ ರೀತಿ ಆಯಿತು. ಇಲ್ಲೂ ಹಾಗೆಯೇ ಆಗುತ್ತಿದೆ. ಈ ಮಾಲೀಕರು ಒಂದು ತೀರ್ಮಾನಕ್ಕೆ ಬರಲಿಲ್ಲ ಅಂದರೆ . ಸರಕಾರವು ಕಾರ್ಖಾನೆಗೆ ಒದಗಿಸಿರುವ ಪೋಲೀಸ್ ರಕ್ಷಣೆಯನ್ನು ಹಿಂತೆಗೆದುಕೊಳ್ಳಬೇಕು. ಇದು ಸರಕಾರದಲ್ಲಿ ಮತ್ತು ಗೃಹ ಸಚಿವರಲ್ಲಿ ನನ್ನ ಮನವಿಯಾಗಿದೆ. ಆಗ ತಾನಾಗಿಯೇ ಮಾಲೀಕರು ದಾರಿಗೆ ಬರುತ್ತಾರೆ.

+ ಶ್ರೀ ಕೆ. ಅಮರನಾಥ ಶೆಟ್ಟಿ (ಕಾರ್ಮಿಕ ಸಚಿವರು) :— ಸನ್ಮಾನ್ಯ ಅಧ್ಯಕ್ಷರೇ, ಸರಕಾರವು ಕೈಗಾರಿಕಾ ವಿವಾದ ಕಾಯಿದೆ-1947ರ ಅಡಿಯಲ್ಲಿ ಕಾನೂನು ರೀತ್ಯಾ ಹಲವಾರು ಸಂಧಾನ ಸಭೆಗಳನ್ನು ಆಡಳಿತ ವರ್ಗ ಮತ್ತು ಪ್ರತಿನಿಧಿಗಳ ನಡುವೆ ನಡೆದಿದೆ. ಈ ಸಂಧಾನ ವಿಫಲತೆಗೊಂಡಿದ್ದು ಕೈಗಾರಿಕಾ ಕಾಯಿದೆ ಕಲಂ-10 1ಡಿರ ಅಡಿಯಲ್ಲಿ ವಿವಾದಗಳನ್ನು ಔದ್ಯೋಗಿಕ ನ್ಯಾಯಾಧಿಕರಣಕ್ಕೆ ನ್ಯಾಯ ನಿರ್ಧಾರಕ್ಕಾಗಿ ಈ ಕೆಳಕಂಡ ಮಾದಾಂಶಗಳೊಡನೆ ಕಳುಹಿಸಲಾಗಿದೆ. (1) ಬಿಪಿಎಲ್ ಗ್ರೂಪ್ ಆಫ್ ಕಂಪನೀಸ್ ಕಾರ್ಮಿಕರ ಸಂಘ, ಇವರು ಎತ್ತಿರುವ ಬೇಡಿಕೆಗಳು ನ್ಯಾಯ ಸಮ್ಮತವೇ? (2) ಸದರಿ ಕಾರ್ಮಿಕರು ಮದ್ಯಂತರ ಪರಿಹಾರಕ್ಕೆ ಅರ್ಹರೇ? (3) ದಿನಾಂಕ 19-11-1998 ರಿಂದ ಕಾರ್ಮಿಕರು ಮುಷ್ಕರ ಮಾಡಿರುವುದು ನ್ಯಾಯ ಸಮ್ಮತವೇ? (4) ಆಡಳಿತ ವರ್ಗದವರು ನೌಕರರನ್ನು ವಜಾ ಮಾಡಿರುವುದು ನ್ಯಾಯ ಸಮ್ಮತವೇ? ಹಾಗೂ ಮುಷ್ಕರವು ಕೈಗಾರಿಕಾ ಉತ್ಪಾದನೆಯನ್ನು ಕುಂಠಿತಗೊಳಿಸುವುದರಿಂದ ಮತ್ತು ಕಾರ್ಮಿಕರಿಗೆ ಕೆಲಸ ಇಲ್ಲದಂತೆ ಮಾಡಿರುವುದರಿಂದ ಕಾಲಂ 10-3 ಪ್ರಕಾರ ಮುಂದುವರಿಸಿರುವ ಮುಷ್ಕರವನ್ನು ನಿಷೇಧಿಸಲಾಗಿದೆ. ಈ ಸಂಸ್ಥೆಯಲ್ಲಿ ಕನಿಷ್ಠ ಕೂಲಿ ಕೊಡುತ್ತಾ ಇಲ್ಲ ಎಂದು ಹೇಳಿದ್ದರು. ಆದರೆ ಅದನ್ನು ಕೊಡಲಾಗುತ್ತಿದೆ. ಎಲ್ಲಾ ಹಂತದಲ್ಲಿ ಮಾತುಕತೆ ಅವರಲ್ಲಿ ನಡೆದಿರುತ್ತದೆ. ಬಿಪಿಎಲ್ ಸಂಸ್ಥೆಯಲ್ಲಿ ಎಲ್ಲಿಯೂ ಬೀಗಮುದ್ರೆ ಇರುವುದಿಲ್ಲ. ಆದ್ದರಿಂದ ಬೀಗಮುದ್ರೆಯನ್ನು ನಿಷೇಧ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಬಿ.ಪಿ.ಎಲ್. ಗ್ರೂಪ್ ಆಫ್ ಇಂಡಸ್ಟ್ರೀಸ್ ಕಾರ್ಮಿಕರ ಸಂಘವು ದೇಶದ ಉಳಿದೆಡೆ ಬಿಪಿಎಲ್ ಕಾರ್ಮಿಕರಿಗೂ ಅನ್ವಯಿಸುವಂತೆ ನೊಂದಾವಣೆ ಮಾಡಿದ್ದು ಟ್ರೇಡ್ ಯೂನಿಯನ್ ಕಾನೂನು ಪ್ರಕಾರ ಸಿಂಧುವಲ್ಲವೆಂದು ಇಲಾಖೆಯ ಅಭಿಪ್ರಾಯವಿರುವುದರಿಂದ ಆ ಸಂಘಕ್ಕೆ ನೊಂದಾವಣೆಯನ್ನು ಏಕೆ ಹಿಂತೆಗೆದುಕೊಳ್ಳಬಾರದೆಂದು ಷೋಕಾಸ್ ನೋಟೀಸ್ ನೀಡಲಾಗಿತ್ತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಮಂತ್ರಿಗಳು ಹೊಸದಾಗಿ ಬಂದಿದ್ದಾರೆ.

ಅಮರನಾಥಶೆಟ್ಟಿಯವರು ನನ್ನ ಪಕ್ಷದ ರೂಮಿನವರು. ಭಾರಿ ಸ್ನೇಹಿತರು. ಅವರಿಗೆ ಪಾಪ ಗೊತ್ತಿಲ್ಲ. ನಾನು ಆಗಲೇ ಪ್ರಾರಂಭದಲ್ಲಿಯೇ ಹೇಳಿದೆ. ಅದರ ಬಗ್ಗೆ ಪೂರ್ಣ ಮಾಹಿತಿ ಇಲ್ಲ ಎಂದು ಹೇಳಿದೆ. ಇವತ್ತು ಕೈಗಾರಿಕಾ ವಿವಾದಕ್ಕೆ ಒಪ್ಪಿಸಬೇಕಾದರೆ ಕೆಲವು ಕನಿಷ್ಟವಾದ ನಿಯಮಗಳಿವೆ. ಮತ್ತು ಆ ಪರಿಸ್ಥಿತಿಯಲ್ಲೂ ಕೆಲವು ನಿರ್ದಿಷ್ಟವಾದ ಕ್ರೈಟೀರಿಯಾಗಳು ಇವೆ. ಅಲ್ಲಿ ಯಾವುದೇ ರೀತಿಯಾದ ವಿವಾದಗಳು ಇಲ್ಲ ಅಲ್ಲಿ ಇರುವ ಪ್ರಶ್ನೆ ಒಂದು. ಸಂಘವನ್ನು ಮಾನ್ಯ ಮಾಡಬೇಕೆನ್ನುವ ಪ್ರಶ್ನೆ ಅವರ ಪ್ರಮುಖವಾದ ಬೇಡಿಕೆ. ಆ ಬೇಡಿಕೆಗೆ ಇವರು ನ್ಯಾಯಾಧಿಕಾರಕ್ಕೆ ಒಪ್ಪಿಸುವ ಅವಶ್ಯಕತೆ ಇಲ್ಲ. ಅದು ಕಾನೂನು ಸಮ್ಮತವೂ ಅಲ್ಲ. ಎರಡನೆಯದು ಇವರು ಹೇಳುವುದು ಬಿ.ಪಿ.ಎಲ್. ಕಾರ್ಖಾನೆ ಇಡೀ ದೇಶದ ಬೇರೆ ಬೇರೆ ಭಾಗಗಳಲ್ಲಿದೆ. ಬೇರೆ ಬೇರೆ ಭಾಗಗಳಲ್ಲಿರುವ ಸಂದರ್ಭದಲ್ಲಿ ರಾಷ್ಟ್ರ ವ್ಯಾಪ್ತಿಯಾಗಿರುವ ಒಂದು ಸಂಘಟನೆಯಲ್ಲಿ ಒಂದು ರಾಜ್ಯಕ್ಕೆ ಸೀಮಿತವಾಗಿ ಸಂಘ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ ಎಂದು ಹೇಳುವುದು ಪಾಪ ಅವರಿಗೆ ಕಾನೂನು ವಿವರ ಗೊತ್ತಿಲ್ಲ. ಒಂದು ರಾಜ್ಯದಲ್ಲಿ ಲೇಬರ್ ಆಕ್ಟ್ ಸ್ಪೆಸಿಫಿಕ್ ಆಗಿ ಹೇಳುತ್ತದೆ. ಈಗ ಐಟಿಐ ಫ್ಯಾಕ್ಟರಿ ಬೆಂಗಳೂರಿನಲ್ಲಿ ಇದೆ, ಬೇರೆ ಬೇರೆ ರಾಜ್ಯಗಳಲ್ಲಿಯೂ ಇದೆ. ಹೆಚ್.ಎ.ಎಲ್. ಅದೇ ರೀತಿ ಇದೆ. ಬೆಂಗಳೂರಿನಲ್ಲಿರುವ ಹೆಚ್.ಎ.ಎಲ್.ನವರು ಸಂಘವನ್ನು ಕಟ್ಟಿಕೊಳ್ಳಬಾರದು, ವಿದೇಶದಲ್ಲಿರುವವರು ಕಾರ್ಮಿಕರೆಲ್ಲಾ ಸಂಘವನ್ನು ಕಟ್ಟುವವರೆಗೂ ನೀವು ಸಂಘವನ್ನು ಕಟ್ಟಿಕೊಳ್ಳಬಾರದು ಎನ್ನುವ ವಾದ ಏನು ಇದೆ, ಪಾಪ, ಅಮರನಾಥಶೆಟ್ಟಿಯವರಿಗೆ ಗೊತ್ತಿಲ್ಲ. ಯಾರೋ ಅವರ ಅಧಿಕಾರಿಗಳು ಬರೆದುಕೊಟ್ಟಿದ್ದಾರೆ. ಅವರು ಹೇಳಿದ್ದಾರೆ. ಹಾಗಾಗಿ ಇದು ಯಾವ ಕಾನೂನಿನಲ್ಲೂ ಇಲ್ಲ. ಇವತ್ತಿನವರೆಗೂ ಭಾರತದೇಶದಲ್ಲಿ ಯಾವುದೇ ಕಾನೂನಿನಲ್ಲಿ ಹಾಗೆ ಇಲ್ಲ. ಕಾನೂನಿನಲ್ಲಿ ಇಲ್ಲದೇ ಇರುವುದನ್ನೆಲ್ಲಾ ಮಾಡುತ್ತಾರೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಫ್ಯಾಕ್ಟರಿಯನ್ನು ಕ್ಲೋಸ್ ಮಾಡಿ ಎಂದು ಹೇಳಿ ಯಾವುದೇ ಸರ್ಕಾರ ಇದುವರೆಗೂ ಆಜ್ಞೆ ಮಾಡಿಲ್ಲ. ಜನತಾದಳ ಸರ್ಕಾರ ಮಾತ್ರ ಒಂದು ಮಾತ್ರ ಅನುಮತಿಯನ್ನು ಕೊಟ್ಟಿದೆ. ನಿಮಗೆ ಗೊತ್ತಿರಬಹುದು. ವಳ್ಳಿಯಪ್ಪ ಟಿಕ್ಸ್‌ಟೈಲ್ಸ್ ಎಂದು. ಅಲ್ಲಿ ಗೋಲಿಬಾರ್ ಆಗಿ 4 ಜನರು ಸತ್ತರಲ್ಲಾ ಕಾರ್ಖಾನೆಯನ್ನು ನೀವು ಮುಚ್ಚಬಹುದು ಎಂದು ಹೇಳಿ ಅನುಮತಿಯನ್ನು ಕೊಟ್ಟರತಕ್ಕಂಥ ಕರ್ನಾಟಕ ರಾಜ್ಯದ ಪ್ರಪ್ರಥಮ ಸರ್ಕಾರ ಜನತಾ ದಳ ಸರ್ಕಾರ. ಇದುವರೆಗೂ ಯಾವ ಸರ್ಕಾರವೂ ಫ್ಯಾಕ್ಟರಿಯನ್ನು ಮುಚ್ಚಲಿಕ್ಕೆ ಅನುಮತಿಯನ್ನು ಕೊಟ್ಟಿಲ್ಲ. ಏಕೆಂದರೆ ಕಾರ್ಮಿಕ ಕಾನೂನುಗಳನ್ನೆಲ್ಲಾ ಇವರು ಗಾಳಿಗೆ ತೂರಿರತ್ಕಂಥವರು. ಇವರಿಗೆ ಕಾನೂನು ಹೇಗೆ ಗೊತ್ತಾಗಬೇಕು? ದೇಶದಲ್ಲಿ ಎಲ್ಲಾ ಕಡೆ ಬಿಪಿಎಲ್ ಫ್ಯಾಕ್ಟರಿಗಳು ಇವೆ. ಅದಕ್ಕೋಸ್ಕರ ಅಲ್ಲೆಲ್ಲಾ ಯೂನಿಯನ್ ಆಗುವವರೆಗೂ ಇಲ್ಲಿ ಯೂನಿಯನ್ ಆಗಬಾರದು ಎಂದು ಹೇಳುವ ತರ್ಕಕ್ಕೆ ಎಲ್ಲಿಯಾದರೂ ಸಾಧ್ಯ ಇದೆಯೇ? ಇದು ಯಾವ

ಕಾನೂನಿನಲ್ಲಿ ಇದೆ ಎಂದು ಅವರು ಹೇಳಲಿ. ಪಾಪ, ಅವರಿಗೆ ಗೊತ್ತಿಲ್ಲ. ಗೊತ್ತಿಲ್ಲದೇ ಇರುವ ವಿಷಯವನ್ನು ತಾವು ದಯವಿಟ್ಟು ಹೇಳಬೇಡಿ. ನಾನು ಏನು ಮಾಡಬೇಕೆಂದು ಪಟ್ಟಿ ಮಾಡಿ ಹೇಳಿದ್ದೇನೆ. ಅವರ ಯೂನಿಯನನ್ನು ರೆಜಿಸ್ಟ್ರೇಸ್ ಮಾಡಬೇಕು.

ಅಧ್ಯಕ್ಷರು:— ಆಬ್ಸೆಂಯಲ್ಲಿ ಅಮರನಾಥ ಶೆಟ್ಟಿಯವರು ಈ ಇಲಾಖೆಗೆ ಹೊಸಬರು ಇದ್ದಾರೆ. ಬಹಳ ಗಂಭೀರವಾದ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದಿಂದ ಬೇರೆ ಯಾರಾದರೂ ಹಿರಿಯರು ಜವಾಬ್ದಾರಿ ತೆಗೆದುಕೊಂಡು ಉತ್ತರವನ್ನು ಹೇಳಬೇಕಾಗುತ್ತದೆ. ಇಂಡಸ್ಟ್ರೀ ಮಿನಿಸ್ಟರ್ ಇಲ್ಲ. ಮುಖ್ಯಮಂತ್ರಿಗಳು ಇರಬೇಕೆಂದು ಅವರು ಅಪೇಕ್ಷೆ ಪಟ್ಟರು. ಮುಖ್ಯಮಂತ್ರಿಗಳು ಏನು ಕಾರಣವೋ ಅವರು ಬಂದಿಲ್ಲ. ನೀವು ಎಲ್ಲಾ ನಿಮ್ಮ ಪಾಡಿಗೆ ನೀವು ಇದ್ದುಬಿಟ್ಟಿದ್ದೀರಿ. ಈ ರೀತಿಯಾದರೆ ಹೇಗೆ?

ಶ್ರೀ ಕೆ.ಎನ್. ನಾಗೇಗೌಡ:— ಲೇಬರ್ ಯೂನಿಯನ್ ರೆಜಿಸ್ಟ್ರೇಸ್ ಮಾಡಬೇಕೆಂದು ಸರ್ಕಾರ ಹೇಳಬೇಕೆಂದು ಹೇಳಿದರು. ಅದು ಸರ್ಕಾರದ ಜವಾಬ್ದಾರಿ ಅಲ್ಲಿ. ಅದಕ್ಕೆ ಅಪ್ರೊಪ್ರಿಯೇಟ್ ಅಥಾರಿಟಿ ಇದೇ ಅವರನ್ನು ಅಪ್ರೋಚ್‌ಮಾಡಬೇಕು. ಅಲ್ಲಿರುವ ನಿಯಮಾವಳಿಗಳನ್ನು ತುಂಬಬೇಕು. ಅದು ರೆಜಿಸ್ಟ್ರೇಸ್ ಆಗಬೇಕಾದರೆ ಕೆಲವು ಗೈಡ್‌ಲೈನ್ಸ್‌ಗಳು ಇವೆ. ಆ ರೀತಿ ಅವರನ್ನು ಅಪ್ರೋಚ್‌ಮಾಡುವುದಕ್ಕೆ ಸರ್ಕಾರ ಹೇಳುತ್ತದೆ.

ಅಧ್ಯಕ್ಷರು:— ಮಾನ್ಯ ನಾಗೇಗೌಡರಿಗೆಲ್ಲಾ ಮಾಹಿತಿ ಇದೆ. ಅವರು ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:— ಸರ್ಕಾರ ನೇರವಾಗಿ ಬಿಪಿಎಲ್ ಮಾಲೀಕರನ್ನು ರಕ್ಷಣೆ ಮಾಡುತ್ತಿದೆ. ಅವರಿಗೆ ಬೆಂಬಲವನ್ನು ಕೊಡುತ್ತಿದ್ದಾರೆ. ಪೋಲೀಸರು ಅಲ್ಲಿ ದಬ್ಬಾಳಿಕೆ ಮಾಡುತ್ತಿದ್ದಾರೆ. ಕಾರ್ಮಿಕರನ್ನೆಲ್ಲಾ ತೆಗೆದುಕೊಂಡು ಹೋಗಿ ಬಳ್ಳಾರಿ ಜೈಲಿಗೆ ಹಾಕುತ್ತಿದ್ದೀರಿ. ಇದೇನು ಹುಡುಗಾಟವೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:— ಯಾರು ಅಪ್ರೋಪ್ರಿಯೇಟ್ ಅಥಾರಿಟಿ ಎಂಬುದನ್ನು ಹೇಳಿ.

ಶ್ರೀ ವಾಟಾಳ್ ನಾಗರಾಜ್ :— ಇದನ್ನು ಯಾರು ಕೇಳುವವರು ಇಲ್ಲವೇನು? ಆ ಬಿಪಿಎಲ್ ಮಾಲೀಕನ ಜೊತೆಯಲ್ಲಿ ಸಂಧಾನ ನಾನು ತಮಗೆ ಹೇಳುತ್ತಿದ್ದೇನೆ. ಸರ್ಕಾರ ನೇರವಾಗಿ ಪ್ರಾಮಾಣಿಕವಾಗಿ ಚಿಂತನೆ ಮಾಡುತ್ತಿಲ್ಲ. ಸರ್ಕಾರ ನೇರವಾಗಿ ಮಾಲೀಕರಿಗೆ ಬೆಂಬಲವನ್ನು ಕೊಡುತ್ತಿದ್ದಾರೆ. ಆ ಕಾರ್ಮಿಕರು ಬೀದಿ ಪಾಲು ಮಾಡುವುದಕ್ಕೆ ಬೆಂಬಲ ಕೊಡುವವರು ಸರ್ಕಾರವೇ. ಅದರಲ್ಲಿ ಬೇರೆ ಮಾತಿಲ್ಲ. ಆದ್ದರಿಂದ ತಾವು ಹೇಳಿದ್ದು ನಿಜ. ಇಲ್ಲಿ ಯಾರು ಅದಕ್ಕೆ ಸರಿಯಾದ ಉತ್ತರ ಕೊಡುವ ಸಚಿವರು ಇಲ್ಲದೇ ಇರುವುದು ಶೋಚನೀಯ.

ಅಧ್ಯಕ್ಷರು :— ನಾಗೇಗೌಡರು ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಅವರು ಮಾಡುತ್ತಾರೆ. ನನಗೆ ಅವರ ಬಗ್ಗೆ ನಂಬಿಕೆ ಇದೆ.

(ಗೊಂದಲ)

ಶ್ರೀ ಎನ್. ರಾಜಣ್ಣ :— ಮೂರು ತಿಂಗಳಿಂದಲೂ ಅಲ್ಲಿ ಇದೇ ಸಮಸ್ಯೆ ಇದೆ. ಜನರು ಬೀದಿಪಾಲಾಗಿದ್ದಾರೆ. ಬಡವರ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :— ಬಿಪಿಎಲ್ ಕಾರ್ಖಾನೆಯ ಕಾರ್ಮಿಕರ ಹಿತವನ್ನು ಕಾಪಾಡುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಅದರಲ್ಲಿ ಬೇರೆ ಮಾತು ಇಲ್ಲವೇ ಇಲ್ಲ. ಆ ಬಿಪಿಎಲ್ ಕಾರ್ಖಾನೆ ಮಾಲೀಕ ದೊಡ್ಡ ತಿಮಿಂಗಿಲ. ಮೊದಲು ಬಿಪಿಎಲ್ ಕಾರ್ಖಾನೆ ಮಾಲೀಕನನ್ನು ಅರೆಸ್ಟ್ ಮಾಡಬೇಕು. ಆಗ ಸ್ಪಷ್ಟವಾಗಿ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಕಾನೂನಿನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :— ಕಾರ್ಮಿಕರನ್ನು ಬಂಧನ ಮಾಡಿ ಬಳ್ಳಾರಿ ಜೈಲಿಗೆ ಕಳುಹಿಸಿದ್ದಾರೆ. ಕಾರ್ಮಿಕರ ಬಗ್ಗೆ ಪೋಲೀಸ್ ದಬ್ಬಾಳಿಕೆಯನ್ನು ಉಪಯೋಗಿಸುತ್ತೀರಿ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ :— ಕಾರ್ಮಿಕರ ಜೊತೆಯಲ್ಲಿ ಮಾತನಾಡಿದೆ. ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಅಲ್ಲಿರುವ ಮಾಲೀಕರನ್ನು ಕರೆಸಿ ಸಂಧಾನ ಮಾಡುವುದಕ್ಕೆ ಮತ್ತೊಂದು ಸಾರಿ ಸರ್ಕಾರ ಪ್ರಯತ್ನವನ್ನು ಮಾಡುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಸಿದ್ಧರಾಮಯ್ಯನವರು ಕಾರ್ಮಿಕ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಇದೆಲ್ಲಾ ಮಾಡಿ ಅವರೊಂದು ಫೈಲ್ ಮೇಲೆ ಆರ್ಡರನ್ನೇ ಮಾಡಿದರು.

ಅಧ್ಯಕ್ಷರು :— ಸಿದ್ಧರಾಮಯ್ಯನವರ ವಿಚಾರ ನನಗೆ ಗೊತ್ತಿಲ್ಲ. ನಾವು ಪ್ರಾಕ್ಟಿಕಲ್ ಆಗಿ ಇರಬೇಕು. ನಾಗೇಗೌಡರು ಮುಖ್ಯಮಂತ್ರಿಗಳ ವಿಚಾರದಲ್ಲಿ ನಾನು ಹೇಳಿ ಮಾಡಿಸುತ್ತೇನೆಂದರೆ ಅದು ಆಗುತ್ತದೆ. ಅದರ ಬಗ್ಗೆ ನೀವು ಅನುಮಾನ ಪಡಬೇಕಾಗಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಇಲ್ಲ. ಏಕೆಂದರೆ ನಾಗೇಗೌಡರು ಆ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರುವುದಿಲ್ಲ.

ಅಧ್ಯಕ್ಷರು :— ನಾಗೇಗೌಡರು ಜವಾಬ್ದಾರಿ ತೆಗೆದುಕೊಂಡ ಮೇಲೆ ಮುಖ್ಯಮಂತ್ರಿಗಳು ಒಪ್ಪಿಕೊಳ್ಳುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಟ್ರೆಜರಿ ಬೆಂಚ್‌ನಲ್ಲಿರುವವರು ಯಾರೇ ಹೇಳಿಕೆ ಕೊಟ್ಟರೂ ಸಹಿತ ಅವರು ಜವಾಬ್ದಾರಿ ತೆಗೆದುಕೊಂಡಂತೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :— ಶಿವರಾಮೇಗೌಡರು ಯಾವ ಬೆಂಚ್?

ಶ್ರೀ ಕೆ.ಎನ್. ನಾಗೇಗೌಡ :— ನನಗೆ ಸ್ವಲ್ಪ ಮಾಹಿತಿ ಗೊತ್ತಿದೆ. ಬಿ.ಎಲ್. ಶಂಕರ್‌ರವರು ಪ್ರಪ್ರಥಮವಾಗಿ ಕಾರ್ಮಿಕ ಸಚಿವರಾದಾಗ ಬಹಳ ಪ್ರಯತ್ನ ಮಾಡುವುದಕ್ಕೆ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದು ನನಗೆ ಗೊತ್ತಿದೆ. ಅದರಿಂದ ಅವರು ಹೇಳಿದರು ಮಾಲೀಕರು ಬರುತ್ತಿಲ್ಲ ಎಂದು. ಮುಖ್ಯಮಂತ್ರಿಗಳ ಜೊತೆಯಲ್ಲಿ ನಾವೆಲ್ಲಾ ಮಾತನಾಡಿ ಆ ಮಾಲೀಕರನ್ನು ಕರೆಸಿಕೊಂಡು ಕಾರ್ಮಿಕರಿಗೆ ಆಗಿರುವ ಅನ್ಯಾಯವನ್ನು ಬಗೆಹರಿಸಬೇಕು ಎಂದು ನೋಡುತ್ತೇವೆ. ರೆಕಗ್ನೈಸ್ ಮಾಡುವ ಬಗ್ಗೆ ಹೇಳಿದರು, ರೆಕಗ್ನೈಸ್ ಮಾಡುವವರು ಮ್ಯಾನೇಜ್‌ಮೆಂಟ್‌ನವರು ಅದರ ಬಗ್ಗೆ ಮಾತುಕತೆ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ :— ಬಿಪಿಎಲ್ ಮಾಲೀಕರು ಇದ್ದಾರಲ್ಲಾ, ಅವರಿಗೊಬ್ಬ ಮುಖ್ಯಮಂತ್ರಿ ಇದ್ದಾರೆಂದು ತಿಳಿದುಕೊಂಡಿದ್ದೀರಾ?

ಅಧ್ಯಕ್ಷರು :— ಯಾರು ಅದು. ನಮಗೆ ಹೇಗೆ ಗೊತ್ತಾಗಬೇಕು. ನಿಮಗೆ ಗೊತ್ತಾದರೆ ನಮಗೆ ಗೊತ್ತಾಗುವುದು ಬೇಡವೇ? ಅವರಿಗೆ ನಿಮಗೆ ಇಬ್ಬರಿಗೆ ಗೊತ್ತಾದರೆ ನಮಗೆ ಗೊತ್ತಾಗುವುದು ಬೇಡವೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಏನು ಬಿಪಿಎಲ್ ಬಗ್ಗೆ ಹೇಳಿದರು. ಆ ವಿಚಾರವನ್ನು ಪೂರ್ಣವಾಗಿ ಕ್ರೋಢೀಕರಿಸಿ ಹೊಸದಾಗಿ ಮಂತ್ರಿಗಳಾಗಿರುವುದರಿಂದ ಮಾಹಿತಿ ಕೊಡುವುದಕ್ಕೆ ಆಗಲಿಲ್ಲ. ಸುರಪ್ಪಲ್ ಘಟನೆ ಬಗ್ಗೆ ನಾಳೆನೇ ಕೊಡಿ ಎಂದು ತಾವು ಆದೇಶ ಕೊಟ್ಟಿದ್ದೀರಿ. ಅದೇ ರೀತಿ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ವಿಚಾರ ಕೇಳುತ್ತಿದ್ದೇನೆ.

ಅಧ್ಯಕ್ಷರು :— ಮಾನ್ಯ ಪುಟ್ಟಣ್ಣಯ್ಯನವರೇ, ನಾನು ಹೇಳುವುದನ್ನು ಕೇಳಿ. ನೀವು ಮತ್ತೆ ಶ್ರೀರಾಮರೆಡ್ಡಿಯವರು ಎಲ್ಲಾ ಬರೀ ಆದರ್ಶವಾದಿಗಳು. ನಿಮಗೆ ಕೆಲವು

ಲೌಕಿಕವಾದಂತಹ ವಿಚಾರ ಗೊತ್ತಾಗುವುದಿಲ್ಲ. ಸನ್ಮಾನ್ಯ ನಾಗೇಗೌಡರಂತಹ ಒಬ್ಬ ಹಿರಿಯ ಮಂತ್ರಿಗಳು ಮುಖ್ಯಮಂತ್ರಿಗಳ ಪರವಾಗಿ ಆಶ್ವಾಸನೆಯನ್ನು ಕೊಟ್ಟ ಮೇಲೆ ಅಲ್ಲಿಗೆ ಮುಗಿಯಿತು. ಅವರು ಸಂಧಾನ ಮಾಡಿಸಿಯೇ ತೀರುತ್ತಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ಮಾತು ಹೇಳಿದರು. ನಾಗೇಗೌಡರು ಎಂದರೆ ಸರ್ಕಾರ, ಸರ್ಕಾರ ಎಂದರೆ ನಾಗೇಗೌಡರು ಎಂದು ಹೇಳಿದರು. ನನಗೆ ಅದರಲ್ಲಿ ಪೂರ್ಣ ವಿಶ್ವಾಸ ಇರುವುದರಿಂದ ಅವರು ಸಂಧಾನಕ್ಕೆ ವ್ಯವಸ್ಥೆ ಮಾಡುತ್ತಾರೆ. ಅಲ್ಲಿ ಅವರು ಇವರೂ ಕುಳಿತಾಗ ನೀವು ಕಾರ್ಮಿಕ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾರೆ. ಈ ವಿಚಾರವನ್ನು ಇಲ್ಲಿಗೇ ಕೈಬಿಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ತಿಮ್ಮಪ್ಪನವರು ಇನ್ನೊಂದು ವಿಚಾರವನ್ನು ಹೇಳಿದರು. ಬಿಪಿಎಲ್ ಮಾಲೀಕನಿಗೆ ಇನ್ನೊಬ್ಬ ಮುಖ್ಯಮಂತ್ರಿ ಇದ್ದಾರೆ ಎಂದು ಹೇಳಿದರು.

ಅಧ್ಯಕ್ಷರು :— ನಾವು ಒಪ್ಪುವುದಿಲ್ಲ. ಕರ್ನಾಟಕ ರಾಜ್ಯಕ್ಕೆ ಒಬ್ಬರೇ ಒಬ್ಬರು ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಜೆ.ಎಚ್. ಪಟೇಲ್‌ರವರ ಮುಖ್ಯಮಂತ್ರಿ ಅಷ್ಟೇ. ಕರ್ನಾಟಕ ರಾಜ್ಯಕ್ಕೆ ಸಂವಿಧಾನ ಬದ್ಧವಾಗಿ ಒಬ್ಬರು ಮುಖ್ಯಮಂತ್ರಿಗಳು ಇದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ :— ಸಾರ್ ಏನೇ ಇರಲಿ, ನಾಳೆ ಸಂಜೆ ಈ ವಿಚಾರದ ಬಗ್ಗೆ ಹೇಳೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ನಾಗೇಗೌಡರ ಬಗ್ಗೆ ನಮಗೆ ವಿಶ್ವಾಸ ಇದೆ. ಅದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ.

ಶ್ರೀ ಕೆ.ಎನ್. ನಾಗೇಗೌಡ :— ನಾನು ಜವಾಬ್ದಾರಿ ತೆಗೆದುಕೊಳ್ಳುತ್ತಿದ್ದೇನೆ. ಈ ಸಂಜೆಗೇ ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಕುಳಿತು ಮಾತನಾಡಿ ಕಾರ್ಮಿಕ ಸಚಿವರು, ನಾವೆಲ್ಲಾ ಕುಳಿತು ಮಾತನಾಡುತ್ತೇವೆ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ್ದಾರೆ. ನಾಳೆ ಮಾನ್ಯ ಮುಖ್ಯಮಂತ್ರಿಗಳಿಂದ ಸ್ಟೇಟ್‌ಮೆಂಟ್ ಮಾಡಿಸುತ್ತೇನೆ.

ಅಧ್ಯಕ್ಷರು :— ನಿಮ್ಮ ಸಾಮರ್ಥ್ಯದ ಬಗ್ಗೆ ಸಂಪೂರ್ಣ ವಿಶ್ವಾಸ ಇದೆ.

ಶ್ರೀ ಕೆ.ಎನ್. ನಾಗೇಗೌಡ :— ನಿಮಗೆ ಗೊತ್ತಿದೆ. ಅವರಿಗೆ ಗೊತ್ತಿಲ್ಲ ಸಾರ್. I am taking up the responsiblity.

ಅಧ್ಯಕ್ಷರು :— ನೀವು ಬೇಕಾದರೆ ಬನ್ನಿ. ಅವರ ಸಾಮರ್ಥ್ಯದ ವಿಚಾರ ನಾನು ಇಡೀ ದಿವಸ ಹೇಳಿಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ನನಗೂ ಮಾನ್ಯ ನಾಗೇಗೌಡರ ಬಗ್ಗೆ ವಿಶ್ವಾಸ ಇದೆ.

ಶ್ರೀ ವಾಟಾಳ್ ನಾಗರಾಜ್:— ತಾವು ಒಂದು ವಿಚಾರ ಹೇಳಿದಿರಿ. ನನಗೆ ಇನ್ನೂ ಅರ್ಥ ಆಗುತ್ತಾ ಇಲ್ಲ. ಸರ್ಕಾರ ಅಂದರೆ ನಾಗೇಗೌಡರು, ನಾಗೇಗೌಡರು ಎಂದರೆ ಸರ್ಕಾರ ಎಂದು ಹೇಳಿದಿರಿ. ನನಗೆ ಇನ್ನೂ ಅರ್ಥ ಆಗಿಲ್ಲ.

ಅಧ್ಯಕ್ಷರು:— ಅವರು ಒಬ್ಬರು ಮಂತ್ರಿ. ಮಂತ್ರಿ ಅಂದರೆ ಸರ್ಕಾರ.

ಶ್ರೀ ವಾಟಾಳ್ ನಾಗರಾಜ್:— ಅದು ಬೇರೆ ವಿಚಾರ. ನಾಗೇಗೌಡರು ಅಂದರೆ ಸರ್ಕಾರ. ಸರ್ಕಾರ ಅಂದರೆ ನಾಗೇಗೌಡರು. ನನಗೆ ಇನ್ನೂ ಅರ್ಥ ಆಗಿಲ್ಲ.

ಅಧ್ಯಕ್ಷರು:— ನಾಗೇಗೌಡರು ಮಂತ್ರಿಗಳಾಗಿದ್ದಾರೆ. ಮಂತ್ರಿ ಅಂದರೆ ಸರ್ಕಾರ ಎಂದು.

ಶ್ರೀ ವಾಟಾಳ್ ನಾಗರಾಜ್:— ಹಾಗಾದರೆ ಇವರೆಲ್ಲಾ ಯಾರು? ಯಾವ ಕಾರ ಇವರು? ಇವರೂ ಸರ್ಕಾರವೊ? ನನಗೆ ಖಂಡಿತ ಅರ್ಥ ಆಗಿಲ್ಲ.

ಅಧ್ಯಕ್ಷರು:— ಮಾನ್ಯ ಯಡಿಯೂರಪ್ಪನವರೇ, ತಾವು ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ವಾಟಾಳ್ ನಾಗರಾಜ್:— ನಾನು 30 ವರ್ಷಗಳಿಂದ ಸದನದಲ್ಲಿದ್ದೇನೆ, ನನಗೆ ಅರ್ಥ ಆಗುತ್ತಿಲ್ಲ.

ಅಧ್ಯಕ್ಷರು:— ಮಾನ್ಯ ಯಡಿಯೂರಪ್ಪನವರೇ, ತಾವು ಚರ್ಚೆಯನ್ನು ಪ್ರಾರಂಭಮಾಡಿ. ಈಗ 4.20 ಆಗಿದೆ. ಮುಖ್ಯಾಲು ಗಂಟೆಯೊಳಗೆ ಮುಗಿಸಿ ಬಿಡೋಣ. ಏಕೆಂದರೆ ಗವರ್ನರ್ ಅಡ್ರೆಸ್ ಮೇಲೆ ಅವರು ಮಾತನಾಡಬೇಕಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:— ಮಾನ್ಯ ನಾಗೇಗೌಡರ ಬಗ್ಗೆ ನಮಗೆ ವಿಶ್ವಾಸ ಇದೆ. ಅವರು ಸ್ಪಷ್ಟವಾಗಿ ಈ ಸದನಕ್ಕೆ ಹೇಳಿಕೆಯನ್ನು ಕೊಡಬೇಕು. ನಾನು ಮುಖ್ಯಮಂತ್ರಿಯವರ ಹತ್ತಿರ ಮಾತನಾಡಿ ನಾಳೆ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ನಾಳೆ ಮುಖ್ಯಮಂತ್ರಿಗಳ ಕೈಯಲ್ಲಿ ಹೇಳಿಕೆ ಮಾಡಿಸುತ್ತೇವೆಂದು ಹೇಳಬೇಕು.

ಅಧ್ಯಕ್ಷರು:— ನಾಗೇಗೌಡರು ಹೇಳುವುದ ಬೇಡ. ನಾನು ಹೇಳಿರುತ್ತೇನೆ ಕೇಳಿ. ನಾಗೇಗೌಡರು ಒಂದು ವೇಳೆ ಈ ವಿಚಾರದಲ್ಲಿ ಅವರು ಹೇಳಿದಂತೆ ಸಂಧಾನ ಮಾಡಿಸುವುದು ಸಾಧ್ಯ ಇಲ್ಲದಿದ್ದರೆ ಈ ರಾಜ್ಯದಲ್ಲಿ ನಿಮಗೆ ಯಾರೂ ಸಂಧಾನ ಮಾಡಿಸುವುದಕ್ಕೆ ಸಾಧ್ಯ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅವರು ಹೇಳಲಿ.

SRI K.N. NAGEGOWDA: What certificate, you want? You have heard about me from the Chair.

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಅಧ್ಯಕ್ಷರು ಇಷ್ಟೊಂದು ಭರವಸೆ ಕೊಟ್ಟ ಮೇಲೂ ಹೀಗೆ ಆದರೆ ಹೇಗೆ?

MR. SPEAKER: He is only a Labour leader.

ಶ್ರೀ ಕೆ.ಎನ್. ನಾಗೇಗೌಡ :—ಸಾರ್, ತಾವು ಇಡೀ ರಾಜ್ಯದ ಪ್ರತಿನಿಧಿ ಇದ್ದೀರಿ.

ಅಧ್ಯಕ್ಷರು :— ನನ್ನ ಮಾತಲ್ಲ ಬಿಡಿ. ನಾನು ಇಲ್ಲಿರುವುದು ಆಕಸ್ಮಿಕ ಅವರಿಗೆ ನಿಮ್ಮ ಭವರೂಪ ಪರಿಚಯ ಇಲ್ಲ. ಏನು ಮಾಡುವುದು? ದೌರ್ಭಾಗ್ಯ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅವರ ಶಕ್ತಿ ಸಾಮರ್ಥ್ಯಗಳು, ಪದನಾಮಗಳು ನನಗೆ ಪರಿಚಯ ಇದೆ. ಅದರ ಬಗ್ಗೆ ನನಗೆ ಅನುಮಾನ ಇಲ್ಲ. ನೀವು ಸ್ಪಷ್ಟವಾಗಿ ಹೇಳಿ. ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ನಾಳೆ ಹೇಳಿಕೆ ಕೊಡಿಸುತ್ತೇನೆಂದು ಹೇಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಅಧ್ಯಕ್ಷರೇ, ಗ್ಯಾರೆಂಟಿ ಕೊಡುತ್ತಿದ್ದಾರಲ್ಲಾ.

ಅಧ್ಯಕ್ಷರು :— ಮಾನ್ಯ ಯಡಿಯೂರಪ್ಪನವರು ಮಾತನಾಡಿ. ತಮ್ಮದಾದ ಮೇಲೆ ಶಿವರಾಮೇಗೌಡರು ಭಾಷಣ ಮುಂದುವರಿಸುತ್ತಾರೆ.

*(೫) ರಾಜ್ಯದಲ್ಲಿ ಅತಿವೃಷ್ಟಿಯಿಂದ ಉಂಟಾದ ಹಾನಿ ಬಗ್ಗೆ.*

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :— ತಾವು ಹೇಳಿದ ಹಾಗೆ ನನಗೆ 45 ನಿಮಿಷವೇನೂ ಬೇಡ. ಅತ್ಯಂತ ಪ್ರಮುಖವಾದಂತಹ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಅತಿವೃಷ್ಟಿಯಿಂದ, ಹೋದ ಸೆಪ್ಟೆಂಬರ್, ಹಾಗೂ ಸೆಪ್ಟೆಂಬರ್ ನಂತರದ ಅತಿ ವೃಷ್ಟಿಯಿಂದ ಕಳೆದ ಹತ್ತಾರು ವರ್ಷಗಳಲ್ಲಿ ಹಿಂದೆಂದೂ ಕಾಣದಂತಹ ಅನಾಹುತ ಕರ್ನಾಟಕ ರಾಜ್ಯದಲ್ಲಿ ಆಗಿದೆ ಎಂದು ಹೇಳಿ ಸರ್ಕಾರ ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡಿತು. ಅಕ್ಟೋಬರ್ 1998ರಲ್ಲಿ ಕೇಂದ್ರ ಸರ್ಕಾರಕ್ಕೆ ತಾವೊಂದು ಮೆಮೋರ್ಯಾಂಡಮ್ ಅನ್ನು ಕಳಿಸಿಕೊಟ್ಟಿದ್ದೀರಿ. ಅದರಲ್ಲಿ ಯಾವ ರೀತಿ ಲಾಸ್ ಆಗಿದೆ, ಎಷ್ಟು ಆಗಿದೆ ಎನ್ನುವಂತಹ ಸಂಗತಿಯನ್ನೂ ಸಹ ಅದರಲ್ಲಿ ತಿಳಿಸಿದ್ದೀರಿ. ಕೇಂದ್ರಕ್ಕೆ ನೀವು ವರದಿಯನ್ನು ಕಳಿಸಿದ ನಂತರ ಕರ್ನಾಟಕ